
# ಅಚಲ

ದ್ವೈಮಾಸಿಕ

ಸೆಪ್ಟೆಂಬರ್ 8-1994

24



* ವೈದೇಹಿ
* ರಾಜಜಾವಾನ
* ಉದಯ
* ಡಾ॥ ಬಿ. ಎನ್. ಸುಮಿತ್ರಾಬಾಯಿ

ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ,
ಬೆಂಗಳೂರು

"ಅಚಲ" ಪತ್ರಿಕೆಯನ್ನು ಪಡೆಯ ಬಯಸುವವರು ದಯವಿಟ್ಟು ಕೆಳಗಿನ ವಿಳಾಸಕ್ಕೆ ಹದಿನೈದು ರೂಪಾಯಿಗಳನ್ನು ಎಂ. ಒ/ಡ್ರಾಫ್ಟ್ ಮೂಲಕ ಕಳುಹಿಸಿ, ಕೂಪನ್‌ನಲ್ಲಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆಯಬೇಕು. ಚೆಕ್ ಮೂಲಕ ಹಣ ಕಳಿಸುವವರು 20/ರೂ. ಗಳಿಗೆ ಕಳಿಸಬೇಕು. ಚಂದಾದಾರರು ತಮ್ಮ ವಿಳಾಸ ಬದಲಾದರೆ ಕೂಡಲೆ ಕಾರ್ಡಿನಲ್ಲಿ ಬರೆದು ತಿಳಿಸಬೇಕು.

★

ಚಂದಾ ವಿವರ :

| | | | |
|---|---|---|---|
| ವಾರ್ಷಿಕ ಚಂದಾ | : | ರೂ. | 15–00 |
| ಅಜೀವ ಚಂದಾ | : | ರೂ. | 150–00 |
| ಚೆಕ್ ಮೂಲಕ | : | ರೂ. | 160–00 |
| ಸಂಸ್ಥೆಗಳಿಗೆ | : | ರೂ. | 200–00 |
| ಬಿಡಿ ಪ್ರತಿ | : | ರೂ. | 2–00 |
| ವಿಶೇಷ ಪ್ರತಿ | : | ರೂ. | 3–50 |

★

Printed at Janashakthi Printers
5th Main Road, Gandhinagar
BANGALORE-560 009
Published by: Dr. G. Ramakrishna
on behalf of Jagruthi Mahila Adhyayana
Kendra, 26, I Main Road, Vyalikaval
BANGALORE-560 003
Editor : N. Gayathri

ಪ್ರಿಯ ಚಂದಾದಾರರೇ,

ಚಂದಾ ನವೀಕರಿಸಿ, ನಿಮ್ಮ ಸ್ನೇಹವಲಯಕ್ಕೂ "ಅಚಲ" ಪರಿಚಯಿಸಿ. ಎಂ. ಒ. ಮೂಲಕ ಚಂದಾದಾರರಾಗುವವರಲ್ಲಿ ವಿಶೇಷ ವಿನಂತಿ. ಎಂ. ಒ. ಫಾರಂನಲ್ಲಿ ತಪ್ಪದೆ ನಿಮ್ಮ ವಿಳಾಸ ಬರೆಯಿರಿ. ಹೀಗೆ ವಿಳಾಸ ಬರೆಯದೆ, ಹಣ ಸಂದಾಯ ಮಾಡುವ ಪ್ರಕರಣಗಳು ಈಗ ಹೆಚ್ಚುತ್ತಿವೆ. ದಯವಿಟ್ಟು ಮರೆಯದೆ ನಿಮ್ಮ ವಿಳಾಸ ಬರೆಯಿರಿ.

★

**ಲೇಖನ, ಹಣ ಕಳುಹಿಸಬೇಕಾದ ವಿಳಾಸ :**

**ಎನ್. ಗಾಯತ್ರಿ**
ಬಿ–30, ರಿಸರ್ವ್ ಬ್ಯಾಂಕ್ ಸ್ಟಾಫ್ ಕ್ವಾರ್ಟರ್ಸ್
9ನೇ ಕ್ರಾಸ್, ಒಂಧನೆ ಮೇನ್, ವಿಜಯನಗರ
2ನೇ ಹಂತ, ಬೆಂಗಳೂರು–560 040

★



★

**ಒಳಗೇನಿದೆ ?**

# ಸಂಪಾದಕೀಯ

## ಧೂಮಕೇತುಗಳ ಶೋಧದಲ್ಲಿ - ಮಹಿಳಾ ವಿಜ್ಞಾನಿ

ಇತ್ತೀಚೆಗೆ ಬೃಹಸ್ಪತಿಗೆ ಬಡಿದ ಧೂಮಕೇತು ಭಾರಿ ಸುದ್ದಿ ಮಾಡಿತು. ಅತಿ ವೇಗದಲ್ಲಿ ಹಾಯ್ದು ಬಂದ ಈ ಧೂಮಕೇತು ಬೃಹಸ್ಪತಿಯ ಮೂತಿಯನ್ನು 50 ಮಿಲಿಯ ಅಣುಬಾಂಬುಗಳ ಆಸ್ಫೋಟದ ಶಕ್ತಿಯಲ್ಲಿ ಗುದ್ದಿತು. ಚರಿತ್ರೆಯಲ್ಲಿ ದಾಖಲಾಗುತ್ತಿರುವ ಮೊಟ್ಟ ಮೊದಲ ಗ್ರಹಕ್ಕೆ ಹೊಡೆಯುತ್ತಿರುವ ಧೂಮಕೇತುವಿನ ಬಡಿತ ಇದು. ಇಂಥಾ ಧೂಮಕೇತು ಭೂಮಿಗೇನಾದರೂ ಬಡಿದಿದ್ದರೆ, ಭೂಮಿಯ ಭವಿಷ್ಯವೇ ಬದಲಾಗುತ್ತಿತ್ತು. 65 ಮಿಲಿಯ ವರ್ಷಗಳ ಹಿಂದೆ ಇಂಥಾದ್ದೇ ಭಾರೀ ಗಾತ್ರದ ಉಲ್ಕೆಯೊಂದು ಭೂಮಿಗೆ ಬಡಿದು ಮಹಾ ಸರಿಸೃಪಗಳು (ಡೈನೊಸಾರ್) ನಶಿಸಿ ಹೋದವು ಎಂದು ವಿಜ್ಞಾನಿಗಳು ಊಹಿಸಿದ್ದಾರೆ.

ಇದೀಗ ಗುರು ಗ್ರಹಕ್ಕೆ ಬಡಿದ ಧೂಮಕೇತು 'ಶೂಮೇಕರ್–ಲೆವಿ'ಯನ್ನು ಕುರಿತಂತೆ ವಿಜ್ಞಾನಿಗಳಿಗಿದ್ದಂತೆ, ಜನಸಾಮಾನ್ಯರಿಗೂ ಭಾರೀ ಕುತೂಹಲವಿತ್ತು. ಆದರೆ ಈ ಧೂಮಕೇತುವನ್ನು ಕಂಡುಹಿಡಿದ ವಿಜ್ಞಾನಿ ಓರ್ವ ಮಹಿಳೆ–ಕ್ಯಾರೊಲಿನ್ ಶೂಮೇಕರ್ ಎಂದು ಬಹಳ ಮಂದಿಗೆ ತಿಳಿದಿಲ್ಲ. ಆಕೆ 32 ಧೂಮಕೇತುಗಳನ್ನು ಕಂಡುಹಿಡಿದಾಕೆ, ಇಂದು ಜೀವಂತವಿರುವ ಯಾವ ವಿಜ್ಞಾನಿಯೂ ಇಷ್ಟು ಸಂಖ್ಯೆಯಲ್ಲಿ ಧೂಮಕೇತುಗಳನ್ನು ಗುರುತಿಸಿಲ್ಲ. ಪತಿ ಶೂಮೇಕರ್‌ನ ಹೆಸರು ಅಂಟಿಸಿಕೊಂಡ ಈ ಪತ್ನಿಯ ಸ್ವಂತ ಹೆಸರೇ ಪತ್ರಿಕೆಗಳಲ್ಲಿ ಉಲ್ಲೇಖವಾಗಲಿಲ್ಲ. ಶೂಮೇಕರ್ ಕಾಮೆಟ್ ದೊಡ್ಡ ಸುದ್ದಿಯಾಯಿತು. ಯಾರೋ ವಿದೇಶದ ಶೂಮೇಕರ್ ಮತ್ತು ಲೆವಿ ಎಂಬ ಪುರುಷ ವಿಜ್ಞಾನಿಗಳ ಹೆಸರಿನದು ಎಂದಷ್ಟೇ ಜನಸಾಮಾನ್ಯರ ನಂಬುಗೆ.

ಬಹುಶಃ ಈ ಧೂಮಕೇತುವನ್ನು ಸಮಯಕ್ಕೆ ಮೊದಲೇ ಕ್ಯಾರೊಲಿನ್ ಗುರುತಿಸದಿದ್ದರೆ ಈ ಅದ್ಭುತ ದೃಶ್ಯವನ್ನು ಕಾಣಲು ಸಾಧ್ಯವಾಗುತ್ತಿರಲಿಲ್ಲ. ಇಂಥಾ ಅದ್ಭುತ ಸಾಧನೆಯ ಈ ಖಗೋಳ ಶಾಸ್ತ್ರಜ್ಞೆ, ಖಗೋಳ ಶಾಸ್ತ್ರವನ್ನು ಶಾಲಾ ಕಾಲೇಜುಗಳಲ್ಲಿ ಕಲಿತವರಲ್ಲ. ನೆನ್ನೆ ಮೊನ್ನೆಯವರೆಗೂ ಮೂರು ಮಕ್ಕಳ ಲಾಲನೆಯಲ್ಲಿದ್ದ ಈ ಗೃಹಿಣಿ, ತನ್ನ ಖಗೋಳಶಾಸ್ತ್ರದ ಕುತೂಹಲವನ್ನೇ ಹವ್ಯಾಸವಾಗಿ ಮುಂದುವರೆಸಿ ಇಂದು ಪ್ರಸಿದ್ಧ ವಿಜ್ಞಾನಿಯಾಗಿದ್ದಾರೆ.

ದ. ಕ್ಯಾಲಿಫೋರ್ನಿಯಾ, 1993ರ ವಸಂತಕಾಲ, ಧೂಮಕೇತುಗಳನ್ನು ವೀಕ್ಷಿಸಲು ಪ್ರಶಸ್ತ ಸಮಯ. ಮೌಂಟ್ ಪಾಲೋಮರ್ ಮೇಲಿನ ವೀಕ್ಷಣಾಲಯದಲ್ಲಿ, ಪತಿ ಜೀನ್ ಜೊತೆಗೆ, ಕ್ಯಾರೊಲಿನ ಶೂಮೇಕರ್ ವಿವರವಾಗಿ ಆಕಾಶವನ್ನು ಪರಿಶೀಲಿಸುತ್ತಿದ್ದರು. ಆಕಾಶವನ್ನು ಎಲ್ಲ ಕಾಲದಲ್ಲೂ, ಎಲ್ಲಾ ವಾತಾವರಣದಲ್ಲಿ ಪರಿಶೀಲಿಸಲು ಸಾಧ್ಯವಿಲ್ಲ. ಜನವರಿಯಲ್ಲಿ ಆಗಸ ದಿಟ್ಟಿಸಲು ಸಿಕ್ಕದ್ದು ಒಂದೇ ಒಂದು ತಿಳಿರಾತ್ರಿ. ಫೆಬ್ರವರಿಯಲ್ಲಿ ಒಂದು ಗಂಟೆ ಮಾತ್ರ ಆಕಾಶವನ್ನು ನೋಡಲು ಅವಕಾಶವಾಗಿತ್ತು. ಮಾರ್ಚ್ ತಿಂಗಳ ಈ ಸಮಯ, ಅಂತರಿಕ್ಷ ವೀಕ್ಷಣೆಗೆ ಉತ್ತಮ ಮಾಸವಾಗಿತ್ತು. ಮೋಡಗಳಿಲ್ಲದ ರಾತ್ರಿಗಳು ಆರಂಭವಾಗಿದ್ದವು. ಆದರೆ ಆ ರಾತ್ರಿ ತೆಗೆದ ಆಕಾಶದ ಛಾಯಾಚಿತ್ರಗಳನ್ನು ಸಂಸ್ಕರಿಸಿದಾಗ ಕಂಡದ್ದು ಬರೀ ಕಪ್ಪು ಹಾಳೆ. ಯಾರೋ ಛಾಯಾಗ್ರಾಹಕ ಫಿಲ್ಮ್ ಇದ್ದ ಪೆಟ್ಟಿಗೆಯನ್ನು ತೆಗೆದು, ಇದ್ದ ಫಿಲ್ಮ್‌ಗಳೆಲ್ಲ ಬೆಳಕಿಗೆ ಒಡ್ಡಲ್ಪಟ್ಟು ಹಾಳಾಗಿದ್ದುವು. ಇಡೀ ರಾತ್ರಿಯ ಶ್ರಮ ವ್ಯರ್ಥವಾಗಿತ್ತು. ಮತ್ತೊಮ್ಮೆ ಅಂಥಾ ಮೋಡಗಳಿಲ್ಲದ ರಾತ್ರಿ ಸಿಗುತ್ತದೆಯೆ ಎಂದು ತುಂಬಾ

ನೊಂದುಕೊಂಡರು. ಮರುದಿನ ವಾತಾವರಣ ಚೆನ್ನಾಗಿರಲಿಲ್ಲ. ಆದರೆ ಈ ಬಾರಿ ಅವರು ಹಾಕಿದ ಫಿಲ್ಮ್ ಸ್ವಲ್ಪವೇ ಕೆಟ್ಟಿತ್ತು. ಆ ಅಂಚು ಹಾಳಾದ ಫಿಲ್ಮ್‌ನಲ್ಲಿ ಅವರು ಹಿಡಿದದ್ದು ಬೃಹಸ್ಪತಿಯತ್ತ ಸಾಗಿದ್ದ 'ನಿಯತ ಕಾಲಿಕ ಧೂಮಕೇತು ಶೂಮೇಕರ್–ಲೆವಿ 9, 1993 ಇ'ಯ ಚಿತ್ರವನ್ನು.

ಕ್ಯಾರೋಲಿನ್ ಶೂಮೇಕರ್ ಖಗೋಳಶಾಸ್ತ್ರದ ರಂಗವನ್ನು ಹೊಕ್ಕು ದಶಕದ ಮೇಲಾಗಿದೆ. ಆಕೆ ತನ್ನ ಪತಿಗೆ ಸೌರವ್ಯೂಹದಲ್ಲಿ, ಅಂಗಾರಕ ಮತ್ತು ಬೃಹಸ್ಪತಿಯ ನಡುವಿರುವ ಕ್ಷುದ್ರ ಗ್ರಹಗಳನ್ನು (ಅಸ್ಟೆರಾಯ್ಡ್) ಗುರುತಿಸಲು ಸಹಾಯಕರಾಗಿ ಖಗೋಳರಂಗವನ್ನು ಪ್ರವೇಶಿಸಿದರು. ಆಕೆಯ ಚುರುಕು ಕಣ್ಣುಗಳು ವೀಕ್ಷಣಾಲಯದಲ್ಲಿ, ತೆರೆದ ಆಗಸದ ಛಾಯಾಚಿತ್ರಗಳನ್ನು ಪರಿಶೀಲಿಸಿ, ಆಗಸದ ನೂರೆಂಟು ಗೊಂದಲಗಳ ನಡುವೆ, ಆ ಸೂರ್ಯನ ಬೆಳಕನ್ನು ಪ್ರತಿಫಲಿಸುವ ಈ ಸಣ್ಣ ಹೊಳಪು ಕ್ಷುದ್ರ ಗ್ರಹಗಳನ್ನು ಗುರುತಿಸುತ್ತಿದ್ದವು. ಕ್ಷುದ್ರ ಗ್ರಹ ಸಂಸ್ಕರಿಸಿದ ನೆಗೆಟಿವ್‌ನಲ್ಲಿ ಕೇವಲ ಪುಟ್ಟ ಕಪ್ಪು ಛಾಯೆ ಮಾತ್ರವಾಗಿ ಕಂಡುಬರುತ್ತಿತ್ತು. ಅದೇ ಸಮಯ, ಕ್ಯಾರೋಲಿನ್ ಧೂಮಕೇತುಗಳ ಹುಡುಕಾಟಕ್ಕೆ ತೊಡಗಿದರು. ಈ ಧೂಮಕೇತುಗಳು ಸೌರವ್ಯೂಹದಲ್ಲಿ ಉದ್ದುದ್ದನೆಯ ಕಕ್ಷೆಯಲ್ಲಿ ವೇಗವಾಗಿ ಚಲಿಸುವ ಧೂಳು ಮತ್ತು ಹಿಮದ ಮುದ್ದೆಗಳು. ಇವು ಸೂರ್ಯನ ಬಳಿ ಬಂದಂತೆ ಅವುಗಳ ಮೇಲ್ಪದರು ಆವಿಯಾಗಿ ಸೂರ್ಯನ ಬೆಳಕನ್ನು ಪ್ರತಿಫಲಿಸುತ್ತದೆ. 1983ರಲ್ಲಿ ಕ್ಯಾರೋಲಿನ್ ತನ್ನ ಮೊಟ್ಟಮೊದಲ ಧೂಮಕೇತು 'ಶೂಮೇಕರ್ 1983ಪಿ'ಯನ್ನು ಗುರುತಿಸಿದ್ದರು. ಇದೀಗ 32 ಧೂಮಕೇತುಗಳು ಈಕೆಯ ಹೆಸರನ್ನು ಹೊತ್ತಿವೆ. ಈಕೆಯ ಖಗೋಳ ಶಾಸ್ತ್ರಜ್ಞ ಪತಿ ಜೀನ್ ಕೂಡಾ ಕಂಡುಹಿಡಿದಿರುವುದು 29 ಧೂಮಕೇತುಗಳನ್ನು ಮಾತ್ರ.

ಹಾಗಾದರೆ ಈಕೆಯ ಗುಟ್ಟೇನು? ಸತತ ಪ್ರಯತ್ನ ಮತ್ತು ಪರಿಶ್ರಮ ಎದ್ದು ಕಾಣುತ್ತದೆ. ವರ್ಷವರ್ಷಗಳಿಂದ ಸತತವಾಗಿ ರಾತ್ರಿ ಆಗಸವನ್ನು ಕ್ಯಾರೋಲಿನ್ ಅಧ್ಯಯಿಸುತ್ತಾ ಬಂದಿದ್ದಾರೆ. ಅದು ಆಕೆ ಒಲಿಸಿಕೊಂಡ ಕಲೆ, ಕೌಶಲವಾಗಿದೆ. 'ಆಕೆ ಸಹಜ ವೀಕ್ಷಕಿ' ಎನ್ನುತ್ತಾರೆ ಪತಿ ಜೀನ್. ಆಗಸದ ಛಾಯಾಚಿತ್ರಗಳನ್ನು ನೋಡಿದರೆ, ಸಾವಿರಾರು ನಕ್ಷತ್ರಪುಂಜಗಳ ಅಂಗಳದಲ್ಲಿ ಈ ಸಣ್ಣ ಧೂಳಿನ ಕಣವನ್ನು ಹುಡುಕುವುದು, ನಿಜಕ್ಕೂ ಹುಲ್ಲುಮೆದೆಯಲ್ಲಿ ಸೂಜಿ ಹುಡುಕುವಷ್ಟು ಕಷ್ಟದ ಕೆಲಸವೆ.

ಧೂಮಕೇತುಗಳ ಅಧ್ಯಯನ ಬರೀ ಹವ್ಯಾಸವಲ್ಲ, ಅದಕ್ಕೆ ಉದ್ದೇಶವಿದೆ. ಇವುಗಳ ಅಧ್ಯಯನದಿಂದ ನಮ್ಮ ಸೌರವ್ಯೂಹ ವಿಕಾಸವಾದ ಬಗೆಯನ್ನು ತಿಳಿಯಬಹುದಿದೆ. ಅದಲ್ಲದೆ ಇವು ಕೆಲವೊಮ್ಮೆ ಗ್ರಹಗಳಿಗೆ ಢಿಕ್ಕಿ ಹೊಡೆಯುವುದುಂಟು. ಪತಿ ಜೀನ್ ಕ್ಷುದ್ರ ಗ್ರಹಗಳು ಮತ್ತು ಧೂಮಕೇತುಗಳು ಗ್ರಹಗಳಿಗೆ ಬಡಿದು, ತಗ್ಗು ದಿನ್ನೆಗಳಾಗಿಸಿದ ಬಗೆಯನ್ನು ಅಧ್ಯಯಿಸುವಾತ. ಈತ ಯು. ಎಸ್. ಜಿಯಾಲೊಜಿಕಲ್ ಸರ್ವೆಯಲ್ಲಿ ಉದ್ಯೋಗದಲ್ಲಿದ್ದು ನಿವೃತ್ತರಾಗಿದ್ದಾರೆ. ಕ್ಯಾರೋಲಿನ್ ಯಾವ ಹುದ್ದೆಯನ್ನೂ ಹಿಡಿದಿರಲಿಲ್ಲ. ಮದುವೆಗೆ ಮೊದಲು ಹೈಸ್ಕೂಲ್ ಒಂದರಲ್ಲಿ ಸಮಾಜಶಾಸ್ತ್ರ ಮತ್ತು ಇಂಗ್ಲಿಷ್ ಹೇಳಿಕೊಡುತ್ತಿದ್ದವರು, ಮದುವೆಯಾದ ಮೇಲೆ ಕೆಲಸ ಬಿಟ್ಟು ಮೂರು ಮಕ್ಕಳ ಪೋಷಣೆಯಲ್ಲಿ ತೊಡಗಿದರು. ಮಕ್ಕಳು ದೊಡ್ಡವರಾದಂತೆ ತನ್ನ ತೀವ್ರ ಆಸಕ್ತಿಯನ್ನು ಹಿಡಿದಿಡುವ ಕೆಲಸವೊಂದರಲ್ಲಿ ತೊಡಗಬೇಕೆಂದು ಹೊರಟ ಕ್ಯಾರೋಲಿನ್‌ರನ್ನು ಧೂಮಕೇತುಗಳು ಆಕರ್ಷಿಸಿದವು. ಖಗೋಳ ಶಾಸ್ತ್ರದಲ್ಲಿಯ ಆಸಕ್ತಿ ಆಕೆಯನ್ನು ವೀಕ್ಷಣಾಲಯಕ್ಕೆ ಎಳೆತಂದಿತು. ಧೂಮಕೇತುಗಳ ಹುಡುಕಾಟ ಆಕೆಗೆ ಭಾರೀ ರೋಮಾಂಚನಕಾರಿ ಅನುಭವವಾಗಿದೆ. ಕ್ಯಾರೋಲಿನ್ ಈಗ ಉತ್ತರ ಅರಿಜ಼ೋನಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕಿಯಾಗಿದ್ದಾರೆ ಹಾಗೂ ಲೊವೆಲ್ ವೀಕ್ಷಣಾಲಯದಲ್ಲಿ ವಿಜ್ಞಾನಿಯಾಗಿದ್ದಾರೆ. ಆಕೆಯ ಮೆಚ್ಚಿನ ಧೂಮಕೇತು ಇದೀಗ ಬೃಹಸ್ಪತಿಯ ಮೂತಿಗೆ ಬಡಿದ 'ಶೂಮೇಕರ್ 1993'. ನಿಜಕ್ಕೂ ಕ್ಯಾರೋಲಿನ್ ಮಾರ್ಚ್ 23, 1993ರ ಆ ರಾತ್ರಿ ತೆಗೆದ ಛಾಯಾಚಿತ್ರಗಳನ್ನು ಹಿಡಿದು ಕುಳಿತಾಗ, ಏನನ್ನಾದರೂ ಕಂಡುಹಿಡಿದ ಯಾವ ಆಸೆಯೂ ಇರಲಿಲ್ಲ. ತಟ್ಟನೆ ಈ ವಿಚಿತ್ರ ವಸ್ತು ಕ್ಯಾರೊಲಿನ್‌ರ ಕಣ್ಣಿಗೆ ಬಿದ್ದಿತ್ತು. ಮತ್ತೂ ತೀಕ್ಷ್ಣವಾಗಿ ನೋಡುತ್ತಾ, ನೋಡುತ್ತಾ ಅದು ಧೂಮಕೇತುವೇ ಆಗಿರಬೇಕೆಂದೆನಿಸಿತು. ಆದರೆ ಅದರ ಆಕಾರ ಉದ್ದಕ್ಕೆ ಸಲಾಕಿಯಂತೆ ವಿಚಿತ್ರವಿತ್ತು. ತಟ್ಟನೆ ತಿರುಗಿ ಜೊತೆಯಲ್ಲಿದ್ದ ಪತಿ ಜೀನ್ ಹಾಗೂ ಸಹ ವಿಜ್ಞಾನಿ ಲೆವಿ

ಅವರಿಗೆ ಹೇಳಿದರು-'ಅರೆ ಇಲ್ಲೊಂದು ಜಜ್ಜಿ ಅಪ್ಪಚ್ಚಿಯಾದಂತಿರುವ ಧೂಮಕೇತು ಕಾಣುತ್ತಿದೆ'. ಎಲ್ಲರೂ ದಿಗ್ಭ್ರಮೆಯಲ್ಲಿ ನಿಂತರು. ಅನೇಕ ಸಣ್ಣ ಧೂಮಕೇತುಗಳು ಆಕಾಶದಲ್ಲಿ ಒಟ್ಟಿಗೇ ಚಲಿಸುತ್ತಿದ್ದುದೇ ಅಂಥಾ ವಿಚಿತ್ರ ಆಕಾರಕ್ಕೆ ಕಾರಣವಾಗಿತ್ತು. ಕ್ಯಾರೋಲಿನ್ ಗುರುತಿಸಿದ ಈ ಧೂಮಕೇತುವಿನ ಕಡೆಗೆ ಹೆಚ್ಚು ಶಕ್ತವಾದ ದೂರದರ್ಶಕವನ್ನು ತಿರುಗಿಸಿ ನೋಡಿದಾಗ, ಅದರಲ್ಲಿ 21 ತುಂಡುಗಳು ಕಂಡು ಬಂದವು! ಅವು ಹೊರಟ ದಿಕ್ಕು, ಹಾದಿ ಸ್ಪಷ್ಟವಾಗಿತ್ತು. ಇವು ಒಂದೇ ಧೂಮಕೇತುವಿನ ತುಂಡುಗಳಾಗಿದ್ದವು. ಜುಲೈ 92ರಲ್ಲಿ, ಬೃಹಸ್ಪತಿಯ ಗುರುತ್ವಾಕರ್ಷಣೆಯ ಸೆಳೆತಕ್ಕೆ 21 ಚೂರುಗಳಾಗಿ ಸಿಡಿದು ಒಡೆದ ಈ ಧೂಮಕೇತು, ಆಕಾಶದಲ್ಲಿ ಪೋಣಿಸಿಟ್ಟ ಮುತ್ತಿನ ಹಾರದಂತಿತ್ತು.

ಇವು ಬೃಹಸ್ಪತಿ ಗ್ರಹದ ಸುತ್ತ ತಿರುಗುತ್ತಿದ್ದವು. ಸೂರ್ಯನ ಸುತ್ತಲೂ ವಿಶಾಲವಾದ ಕಕ್ಷೆಯಲ್ಲಿ ತಿರುಗುವ ಈ ಧೂಮಕೇತು, ಅದ್ಯಾವಗಲೋ ದೊಡ್ಡ ಗ್ರಹವಾದ ಬೃಹಸ್ಪತಿಯ ಗುರುತ್ವಾಕರ್ಷಣದಲ್ಲಿ ಸೆಳೆಯಲ್ಪಟ್ಟು ಇದೀಗ ಬೃಹಸ್ಪತಿಯ ಸುತ್ತ ತುಂಡುಗಳಾಗಿ ತಿರುಗುತ್ತಿತ್ತು.

ಈ ಬಡಿತ ಬೃಹತ್ ಗ್ರಹದ ಒಂದಿಷ್ಟು ಒಳಗುಟ್ಟುಗಳನ್ನು ತಿಳಿಸಲಿದೆ. ಕಾರಣ ಸೂರ್ಯನ ಶೇಖಡಾ ಒಂದರಷ್ಟು ತೂಕವಿರುವ ಈ ಭಾರೀ ಗ್ರಹ, 'ನಕ್ಷತ್ರವಾಗುವಲ್ಲಿ ಸೋತ' ಗ್ರಹವೆಂಬ ಊಹೆ ಇದೆ. ಕುತೂಹಲಕಾರಿ ವಿಷಯವೆಂದರೆ ಬೃಹಸ್ಪತಿಯ ಗುರುತ್ವಾಕರ್ಷಣ ಶಕ್ತಿ ತನ್ನ ಹಾದಿಯಲ್ಲಿ ಹಾದ ಸಣ್ಣಪುಟ್ಟ ಧೂಮಕೇತುಗಳನ್ನೆಲ್ಲ ಒಂದಿಷ್ಟು ತಮ್ಮ ಪಥದಿಂದ ಆಚೆ ಈಚೆ ಎಳೆಯುತ್ತಲೇ ಇರುತ್ತದೆ. ಆದರೆ ಧೂಮಕೇತುವೊಂದು ಬೃಹಸ್ಪತಿಗೇ ನೇರ ಹೋಗಿ ಬಡಿದದ್ದು ತೀರಾ ಅಪರೂಪದ ಘಟನೆ.

ಈ ಎಲ್ಲಾ ಸಂಭ್ರಮದ ನಂತರವೂ ಕ್ಯಾರೋಲಿನ ಪತಿಯೊಡನೆ ಪಾಲೊಮರ್‌ಗೆ ತಿಂಗಳು ತಿಂಗಳು ಓಡುತ್ತಾರೆ. ದಿನವೆಲ್ಲಾ ಮಲಗಿ ರಾತ್ರಿಗೆ ಸನ್ನದ್ಧರಾಗುತ್ತಾರೆ. ಗಗನಕ್ಕೆ ದಿಟ್ಟಿಸಿಟ್ಟು ಛಾಯಾಚಿತ್ರಗಳನ್ನು ತೆಗೆದ ಮೇಲೆ ಆಕೆಯದು ಬೆನ್ನು ಮುರಿವ ಕೆಲಸ. ಕ್ಯಾರೋಲಿನ್ ಸೂಕ್ಷ್ಮದರ್ಶಕದ ಕೆಳಗಿಟ್ಟ ಛಾಯಾಚಿತ್ರವನ್ನು ಬೆನ್ನು ಬಾಗಿಸಿ ಗಂಟೆಗಟ್ಟಲೆ ದಿಟ್ಟಿಸುತ್ತಾಳೆ. ಕಣ್ಣಲ್ಲಿ ಕಣ್ಣಿಟ್ಟು ತನ್ನ ಅಷ್ಟೂ ವರ್ಷಗಳ ಅನುಭವವನ್ನು ಕ್ರೋಢೀಕರಿಸಿ ಕ್ಷುದ್ರ ಗ್ರಹಗಳ, ಇಲ್ಲ ಧೂಮಕೇತುಗಳ ಹೆಜ್ಜೆ ಗುರುತನ್ನು ಹುಡುಕುತ್ತಾಳೆ.

ಒಂದು ರಾತ್ರಿಗೆ 60 ಫಿಲ್ಮ್‌ಗಳು ಸಿದ್ಧವಾಗುತ್ತವೆ. ಒಂದೊಂದರ ಅಧ್ಯಯನಕ್ಕೆ, ನುರಿತ ಕ್ಯಾರೋಲಿನ್‌ಗೂ ಕಡೇ ಪಕ್ಷ ಹತ್ತು ಗಂಟೆಯಾದರೂ ಬೇಕಾಗುತ್ತದೆ. ಅಂದಮೇಲೆ ಧೂಮಕೇತುವಿನ ಬೇಟೆ ಸುಲಭದ್ದಲ್ಲ. ಫಿಲ್ಮ್ ಮೇಲಿನ ಧೂಳು, ಕಲೆ, ಹುಸಿ ಚಿತ್ರಗಳು ಎಲ್ಲವೂ ಈಕೆಯ ಕೆಲಸವನ್ನು ಸಂಕೀರ್ಣಗೊಳಿಸುತ್ತವೆ. ಹೀಗಿದ್ದೂ ಒಂದೇ ವರ್ಷದಲ್ಲಿ ಕ್ಯಾರೊಲಿನ್ ಏಳು ಧೂಮಕೇತುಗಳನ್ನು ಕಂಡು ಹಿಡಿದದ್ದಿದೆ.

ನಮ್ಮಲ್ಲಿ ಎಷ್ಟು ಮಂದಿ ಪ್ರತಿಭಾವಂತ ಮಹಿಳೆಯರು ಮದುವೆ–ಮಕ್ಕಳ ಹಂತದಲ್ಲಿ ತಮ್ಮ ಆಸಕ್ತಿ, ಹವ್ಯಾಸ, ಉದ್ಯೋಗ ಎಲ್ಲವನ್ನೂ ಕೈ ಬಿಟ್ಟದ್ದಿಲ್ಲ. 'ಸಮಯ ಇಲ್ಲ, ಮಕ್ಕಳು ಕೈ ಬಿಡೋಲ್ಲ' ಎಂಬ ಕಾರಣಗಳು, ಆ ಮಕ್ಕಳು ದೊಡ್ಡವರಾಗಿ ಶಾಲೆ. ಕಾಲೇಜುಗಳಿಗೆ ಹೋದ ಮೇಲೂ ನೆಪಗಳಾಗಿ ಮುಂದುವರೆಯುತ್ತವೆ. ಕ್ಯಾರೋಲಿನ್ ಶೂಮೇಕರ್ ನಂಥಾ ಮಹಿಳೆಯರು, ಬದುಕಿನ ಯಾವ ಹಂತದಲ್ಲಿ ಕೂಡಾ ಕಲಿಕೆಯನ್ನು ಪುನರಾರಂಭಿಸಬಹುದು ಎಂದು ತೋರಿಸುತ್ತಾರೆ; ನಮ್ಮೊಳಗಿನ ಆಸಕ್ತಿ, ಸೃಜನಶೀಲ ತುಡಿತಗಳಿಗೆ ಸ್ಫೂರ್ತಿ ನೀಡುತ್ತಾರೆ.

**—ನೇಮಿಚಂದ್ರ**

# ಸ್ತ್ರೀ ಸಂಘಟಿತ ಶಕ್ತಿಯ ಬೃಹತ್ ಸಮಾವೇಶ

"ನಾನು ಚಿಕ್ಕವಳಿದ್ದಾಗ ತುಂಬ ಸಿನಿಮಾ ನೋಡುತ್ತಿದ್ದೆ. ಆಗೆಲ್ಲಾ ಹೆಂಗಸರು ಕಷ್ಟದಲ್ಲಿದ್ದಾಗ ಹೀರೋ ಬಂದು ಬಿಡಿಸುತ್ತಾನೆ ಎಂದೇ ನಂಬಿದ್ದೆ. ಆದರೆ ಇಂದು ನನ್ನ ಅನುಭವ ಹೇಳುತ್ತಿರುವುದೇ ಬೇರೆ. ನಿಜವಾದ ಹೀರೋ, ಹೀರೋಯಿನ್‌ಗಳು ಹುಟ್ಟಿ ಬರುವುದು ಮಹಿಳಾ ಚಳುವಳಿ ಮತ್ತು ಪ್ರಗತಿಪರ ಚಳುವಳಿಗಳಿಂದ ಎಂದು. ಈ ಹೀರೋಯಿನ್‌ಗಳೇ ಜೀವನಕ್ಕೆ ನಿಜವಾಗಿ ಬೆಂಬಲವಾಗುವವರು ಮತ್ತು ನನ್ನಂಥಹವರ ಬಾಳಿನಲ್ಲಿ ನೊಂದವರಿಗೆ ಹೋರಾಡಲು ಶಕ್ತಿ ನೀಡುವವರು"

—ಆಗಸ್ಟ್ 11ರಂದು ಕೊಯಮುತ್ತೂರಿನಲ್ಲಿ ನಡೆದ ನಾಲ್ಕನೆಯ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಷ್ಟ್ರೀಯ ಸಮ್ಮೇಳನದ ಉದ್ಘಾಟನಾ ಸಮಾವೇಶದಲ್ಲಿ ಪದ್ಮಿನಿ ನುಡಿದ ಮಾತುಗಳಿವು. 1992ರ ಜೂನ್‌ನಲ್ಲಿ ಚಿದಂಬರಮ್‌ನಲ್ಲಿ ಸಾಮೂಹಿಕ ಅತ್ಯಾಚಾರಕ್ಕೆ ಬಲಿಯಾದ ಪದ್ಮಿನಿಯ ಹೋರಾಟದ ಅನುಭವದಿಂದ ನುಡಿದ ಮಾತುಗಳಿವು. ಸಹರಾನ್ ಪುರ್‌ನಲ್ಲಿ ಗೂಂಡಾಗಳ ದುರಾಚಾರಕ್ಕೆ ಸಿಲುಕಿ, ಬೆತ್ತಲೆ ಸೇವೆಗೆ ಒಳಗಾದ ಉಷಾ ಧಿಮನ್ ಮತ್ತು 60ರ ವೃದ್ಧ ಶೇಖ್‌ನಿಗೆ ಮದುವೆಯಾಗಬೇಕಾದ ದುರದೃಷ್ಟ ತಪ್ಪಿಸಿಕೊಂಡ ಬಾಲೆ ಅಮೀನಾ, ಇವರುಗಳು ಹೋರಾಟದ ಅವಶ್ಯಕತೆಯನ್ನು ಹೋರಾಡುವ ದೃಢ ಸಂಕಲ್ಪವನ್ನು ಒತ್ತಿ ಹೇಳಿದರು. ಈ ಸಮ್ಮೇಳನಕ್ಕೆ ಆಹ್ವಾನಿತರಾಗಿದ್ದ ವಿಶೇಷ ಅತಿಥಿಗಳು ಇವರು.

16 ರಾಜ್ಯಗಳಲ್ಲಿ ವ್ಯಾಪಿಸಿರುವ 37 ಲಕ್ಷ ಸದಸ್ಯರನ್ನು ಹೊಂದಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಈ ನಾಲ್ಕನೆಯ ರಾಷ್ಟ್ರೀಯ ಸಮಾವೇಶಕ್ಕೆ ದೇಶದ ಎಲ್ಲೆಡೆಯಿಂದಲೂ 800 ಮಹಿಳಾ ಪ್ರತಿನಿಧಿಗಳು ಭಾಗವಹಿಸಿದ್ದರು. ಈ ಸಮಾವೇಶದ ಸ್ವಾಗತ ಸಮಿತಿಯ ಅಧ್ಯಕ್ಷೆ, ಪ್ರತಿಷ್ಠಿತ ತಿರುಮಲಾಂಬ ಪ್ರಶಸ್ತಿ ವಿಜೇತೆ ಶ್ರೀಮತಿ ರಾಜಂ ಕೃಷ್ಣನ್ ಸಮಾವೇಶಕ್ಕೆ ಎಲ್ಲರನ್ನೂ ಸ್ವಾಗತಿಸುತ್ತಾ, ಮಹಿಳಾ ಚಳುವಳಿಯ ಚರಿತ್ರೆಯನ್ನು ಸವಿಸ್ತಾರವಾಗಿ ವಿವರಿಸಿದರು. ಮಹಿಳಾ ಚಳುವಳಿಯು ತನ್ನ ಬೇರುಗಳನ್ನು ಸ್ವಾತಂತ್ರ್ಯ ಸಂಗ್ರಾಮದ ಹೋರಾಟಗಳಲ್ಲಿ, ಸುಧಾರಣಾವಾದಿ ಚಳುವಳಿಗಳಲ್ಲಿ ಗುರುತಿಸಿಕೊಳ್ಳಬೇಕಾಗಿದೆ ಎಂದು ಚಾರಿತ್ರಿಕ ಪರಂಪರೆಯ ಅಗತ್ಯವನ್ನು ವಿವರಿಸಿದರು. ತಮಿಳುನಾಡು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಶ್ರೀಮತಿ ಬಾದರ್ ಸಯದ್ ಸಮಾರಂಭದ ಒಬ್ಬ ಅತಿಥಿಯಾಗಿದ್ದು ಮುಸ್ಲಿಂ ಮಹಿಳೆಯರಿಗೆ ಅನುಕೂಲವಾಗುವಂತಹ ವಿಶೇಷ ಖಾಸಗಿ ಕಾನೂನಿನ ಅಗತ್ಯವನ್ನು ಒತ್ತಿ ಹೇಳಿದರು. ಕಲಕತ್ತಾ ವಿಶ್ವವಿದ್ಯಾನಿಲಯದ ಉಪಕುಲಪತಿಯಾದ ಶ್ರೀಮತಿ ಭಾರತಿ ರಾಯ್ ರಾಜಕೀಯದಲ್ಲಿ ಸಕ್ರಿಯವಾಗಿರುವ ಮಹಿಳೆಯರ ಹೋರಾಟ ಮತ್ತು ಅವರ ಬರವಣಿಗೆಗಳು ಮಹಿಳೆಯರಲ್ಲಿ ಹೊಸ ವ್ಯಕ್ತಿತ್ವವನ್ನು ರೂಪಿಸಲು ನೆರವಾಗಿವೆ ಎಂದು ಮಾತನಾಡಿದರು.

ಸಮಾರಂಭದ ಅಧ್ಯಕ್ಷ ಭಾಷಣ ಮಾಡಿದ ಶ್ರೀಮತಿ ಸುಶೀಲಾ ಗೋಪಾಲನ್‌ರವರು ಹೊಸ ಆರ್ಥಿಕ ನೀತಿಯು ಬೆಲೆ ಏರಿಕೆ, ನಿರುದ್ಯೋಗ ಮತ್ತು ಆರ್ಥಿಕ ಅಭದ್ರತೆಯೊಂದಿಗೆ ಹೆಣ್ಣಿನ ಆರೋಗ್ಯ ಮತ್ತು ದುಡಿಮೆಯ ಬಗ್ಗೆಯೂ ದುಷ್ಪರಿಣಾಮವನ್ನು ಬೀರುತ್ತಿವೆ ಎಂದರು. ದೇಶದಲ್ಲಿರುವ ಕೋಮು ಶಕ್ತಿಗಳು ವ್ಯಕ್ತಪಡಿಸುತ್ತಿರುವ ಮಹಿಳಾ ವಿರೋಧಿ, ಮತೀಯ ಹಾಗೂ ಪುರುಷ ಪ್ರಧಾನ-ಮೌಲ್ಯಗಳನ್ನು ಹೊಡೆದಟ್ಟಲು ಸಂಘಟಿತರಾಗಬೇಕೆಂದು ಮಹಿಳೆಯರಿಗೆ ಕರೆಯಿತ್ತರು.

ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಕಾರ್ಯದರ್ಶಿ ಬೃಂದಾ ಕಾರಟ್ ತಮ್ಮ ವರದಿಯಲ್ಲಿ ಸಮಾನತೆಗಾಗಿ ನಡೆಯುವ ಭಾರತದ ಮಹಿಳಾ ಚಳುವಳಿ ಮೂಲಭೂತವಾಗಿ ರಾಜಕೀಯ ಚಳುವಳಿಯಾಗಿದೆ. ಏಕೆಂದರೆ ಸಮಾಜದ ಸ್ಥಗಿತತೆಯನ್ನು, ವ್ಯವಸ್ಥೆಯನ್ನು ಇದು ಪ್ರಶ್ನಿಸುತ್ತದೆ. ಹಾಗೆಯೇ ಸಾಮಾಜಿಕ ಜೀವನದ ಎಲ್ಲಾ ಹಂತದಲ್ಲೂ ಮಹಿಳೆಯರ ಕೊಡುಗೆಯನ್ನು ಪರ್ಯಾಯವಾಗಿ ಗುರುತಿಸುತ್ತದೆ ಎಂದರು.

## ಅನುಭವಿ ಅನುಭಾವಿ ಲೇಖಕಿ

# ಶ್ರೀಮತಿ ಸರಸ್ವತೀ ಬಾಯಿ ರಾಜವಾಡೆ

★ ವೈದೇಹಿ

ಉಡುಪಿಯ ಕಟ್ಟಲಗೇರಿ ಬಳಿಯ ಉಳಂಜಾಲ ಎಂಬಲ್ಲಿ ಅಕ್ಟೋಬರ್ 3, 1913 ರಂದು ಜನಿಸಿದವರು ಶ್ರೀಮತಿ ಸರಸ್ವತೀಬಾಯಿ ರಾಜವಾಡೆ. ಐವತ್ತರ ದಶಕದಲ್ಲಿ ಕನ್ನಡ ಸಾಹಿತ್ಯ ಲೋಕದ ಸ್ತ್ರೀ ಧ್ವನಿಯಲ್ಲಿ ಮಾತಾಡಿದಾಕೆ. ಮಹಿಳೆಯನ್ನೇ ಕೇಂದ್ರವಾಗಿಟ್ಟುಕೊಂಡು ಆಕೆಯ ಸ್ಥಿತಿಗಳನ್ನು ಕಥೆಯ ಮೂಲಕ ವಿಶ್ಲೇಷಿಸುತ್ತಾ ಬರವಣಿಗೆಗೆ ತೊಡಗಿದ ರಾಜವಾಡೆಯವರ ಜೀವನ ಸಾಮಾನ್ಯ ಪರಿಳಿತಗಳ ಒಂದು ವಾದ್ಯ ವೃಂದದಲ್ಲಿದ್ದುಕೊಂಡು ಇಡೀ ಇಂಡಿಯಾ ಸಂಚರಿಸಿದರು ; ಕೆಲ ಕಾಲ ಹರಿಕಥೆ ಮಾಡಿದರು. ಮನೆ ಚಾಕರಿ ಮಾಡಿದರು, ರಥ-ಬೀದಿಯಲ್ಲಿ ಹೂವಿನ ಹಾರ ಮಾರಿದರು, ಮುಂದೆ ದೊಡ್ಡ ಶ್ರೀಮಂತಿಕೆಗೆ ಒಡತಿಯಾಗಿ, ಮುದುಕ ಗಂಡನೊಂದಿಗೆ ಕೆಲಕಾಲ ಸಂಸಾರ ನಡೆಸಿ, ಪತಿ ತೀರಿಕೊಂಡ ಮೇಲೆ ಉಡುಪಿಗೆ ಮರಳಿ, ದಿನ ಹೋದಂತೆ ವೈರಾಗ್ಯ ತಾಳಿ ಸಂಪತ್ತು ಮಾರಿ ಶ್ರೀಕೃಷ್ಣನಿಗೆ ಸತತ ಮೂರು ಬಾರಿ

**ಒಂದು ರೀತಿಯಲ್ಲಿ ನೋಡಿದರೆ ಆಕೆಗೆ ದಕ್ಕಿದಷ್ಟು ತೀವ್ರ ಅನುಭವಗಳು ಇಡೀ ಇಂಡಿಯಾ ಹುಡುಕಿದರೂ ಯಾವ ಲೇಖಕಿಗೂ ದಕ್ಕಿರಲಿಲ್ಲ. ಮಠದ ಆಗು ಹೋಗುಗಳನ್ನು, ಸ್ವಾಮಿಗಳ ವಹಿವಾಟುಗಳನ್ನು ಈ ಲೇಖಕಿ ಅತಿ ಹತ್ತಿರದಿಂದ ಕಂಡಿದ್ದರು. ಆದರೆ ಕೊನೆಯುವರೆಗೂ ಆಕೆಯನ್ನು ಬಿಡದ ಕೆಲವು ಭ್ರಮೆಗಳು, ಮನಸ್ಸಿನ ಆಳಕ್ಕಿಳಿದು ವಾಸ್ತವದಿಂದ ಹೆಕ್ಕಿ ಕಚ್ಚಿಕೊಂಡು ಮೇಲೆ ತರುವ ಸಾಹಸಕ್ಕೆ ಆಕೆಯನ್ನು ಬಿಡಲೇ ಇಲ್ಲ. ಅತ್ಯಂತ ಪ್ರಮುಖ ಲೇಖಕಿಯಾಗಿ ರೂಪುಗೊಳ್ಳುವ ಎಲ್ಲ ಸತ್ವವಿದ್ದೂ, ಇತಿಹಾಸದ ದೃಷ್ಟಿಯಿಂದ ಮಾತ್ರ ಪ್ರಮುಖ ಲೇಖಕಿಯಾಗಿ ಉಳಿದರು, ರಾಜವಾಡೆ. ಇದು ಕನ್ನಡದ ಮಟ್ಟಿಗೆ, ಲೇಖಕಿಯರ ಕೊಡುಗೆಯ ಮಟ್ಟಿಗೆ ದೊಡ್ಡದೊಂದು ಆಘಾತವೇ ಸೈ.**

ಜೀವನವಲ್ಲ. ಏನೂ ಇಲ್ಲದ ಸ್ಥಿತಿಯಿಂದ ಎಲ್ಲವೂ ಇದ್ದ ಸ್ಥಿತಿಗೆ ಸಾಗಿ ಮತ್ತೆ ಏನೂ ಬೇಡದ ಸ್ಥಿತಿಗೆ ತಾನಾಗಿ ಮರಳಿಕೊಂಡ ವಿಶಿಷ್ಟ ಅನುಭವದ ಖನಿ ಶ್ರೀಮತಿ ರಾಜವಾಡೆ. ಎತ್ತರದ ನಿಲುವು, ಎಂಭತ್ತರ ಹರಯದಲ್ಲಿಯೂ ನೇರ ಬೆನ್ನು, ಚುರುಕು ನಡೆ, ನಿಗಿನಿಗಿ ನಗುಮುಖ. ಹುಟ್ಟಾ ಹಟವಾದಿ. ಅಸಾಧಾರಣ ಮನೋಬಲದವರು ಲೇಖಕಿಯಾಗಿ, ನಟಿ–ನಿರ್ದೇಶಕಿ, ನಾಟಕಕರ್ತೆ, ಪತ್ರಿಕಾ ಸಂಪಾದಕಿ, ಅಂಕಣಕಾರ್ತಿ ಮುಂತಾಗಿ ದುಡಿದ ಈ ಪ್ರತಿಭಾವಂತೆ ಅತಿ ಚಿಕ್ಕ ವಯಸ್ಸಿನಲ್ಲಿಯೇ ಸಿನಿಮಾದಲ್ಲಿ ನಟಿಸಿದರು, ಸಪ್ತೋತ್ಸವ ನಡೆಸಿ, ಚಿನ್ನಾಭರಣಗಳನ್ನು ಮಾರಿ ಬಂದ ಹಣದಿಂದ, ತನ್ನ ಗಂಡನ ವಂಶಕ್ಕೆ ಬಂದ ಸುಮಾರು 1200 ವರ್ಷದಷ್ಟು ಹಳೆಯ ಶಾರದಾ ವಿಗ್ರಹವನ್ನು ಉಡುಪಿಯ ಜಿಟ್ಟಡಿಯಲ್ಲಿ ಪ್ರತಿಷ್ಠಾಪಿಸಿಕೊಂಡು ದೇಗುಲ ಕಟ್ಟಿಕೊಂಡು, ತನ್ನ ಕೊನೆಯ ದಿನಗಳನ್ನು, ಕಳೆದು, ಶಾಂತವಾಗಿ ಅಸುನೀಗಿದರು.

"ಈಕೆ ಗಂಡಾಗಬೇಕಿತ್ತು. ಎಲ್ಲೋ ತಪ್ಪಿ ಹೆಣ್ಣಾಗಿದ್ದಾಳೆ"–ಎಂದು ಜನ ತನಗೆ ಹೇಳುತ್ತಿದ್ದುದನ್ನು ನೆನೆದು ನಗುತ್ತಿದ್ದರು ರಾಜವಾಡೆ. ಆಕೆಯ ವ್ಯಕ್ತಿತ್ವ ಜಡ ಸಮಾಜದಲ್ಲಿದ್ದವರು ಒಮ್ಮೆ ಕಣ್ಣು

ಹೊಸಕಿಕೊಂಡು ತಬ್ಬಿಬ್ಬಾಗಿ ಉದ್ಗರಿಸುವಷ್ಟು ಅಪರೂಪದ ಗುಣವುಳ್ಳದ್ದು. ವಿಶಾಖಾ, ವೀಣಾಪಾಣಿ, ಗಿರಿಬಾಲೆ ಎಂಬೆಲ್ಲ ಕಾವ್ಯನಾಮದೊಂದಿಗೆ ಬರೆಯುತ್ತಿದ್ದ ರಾಜವಾಡೆಯವರ ಕಥೆ-ಕವನಗಳು ಮೂಲತಃ ಆಧ್ಯಾತ್ಮಿಕ ಬಾಗಿನಲ್ಲಿಯೇ ರಚನೆಗೊಂಡವು. ಕೊನೆಕೊನೆಗೆ ಈ ಬಾಗು ಜಾಸ್ತಿಯಾಗಿ ಆಕೆ ಪೂರ್ತಿ ಕೀರ್ತನ ರಚನಕಾರ್ತಿಯಾಗಿ, ಪವಾಡ-ಮಹಿಮೆಗಳ ಬರವಣಿಗೆಗೂ ಕೂಡ ತೊಡಗಿಕೊಂಡು ಲೌಕಿಕದ ತನ್ನ ಬರವಣಿಗೆಗಳನ್ನೆಲ್ಲ "ಒಂದು ಹುಚ್ಚು"-ಎಂದು ಕರೆದುಬಿಟ್ಟರು! ಒಂದು ರೀತಿಯಲ್ಲಿ ನೋಡಿದರೆ ಆಕೆಗೆ ದಕ್ಕಿದಷ್ಟು ತೀವ್ರ ಅನುಭವಗಳು ಇಡೀ ಇಂಡಿಯಾ ಹುಡುಕಿದರೂ ಯಾವ ಲೇಖಕಿಗೂ ದಕ್ಕಿರಲಿಲ್ಲ. ಮಠದ ಆಗುಹೋಗುಗಳನ್ನು, ಸ್ವಾಮಿಗಳ ವಹಿವಾಟುಗಳನ್ನು ಈ ಲೇಖಕಿ ಅತಿ ಹತ್ತಿರದಿಂದ ಕಂಡಿದ್ದರು. ಆದರೆ ಕೊನೆಯವರೆಗೂ ಆಕೆಯನ್ನು ಬಿಡದ ಕೆಲವು ಭ್ರಮೆಗಳು, ಮನಸ್ಸಿನ ಆಳಕ್ಕಿಳಿದು ವಾಸ್ತವದಿಂದ ಹೆಕ್ಕಿ ಕಚ್ಚಿಕೊಂಡು ಮೇಲೆ ತರುವ ಸಾಹಸಕ್ಕೆ ಆಕೆಯನ್ನು ಬಿಡಲೇ ಇಲ್ಲ. ಅತ್ಯಂತ ಪ್ರಮುಖ ಲೇಖಕಿಯಾಗಿ ರೂಪುಗೊಳ್ಳುವ ಎಲ್ಲ ಸತ್ವವಿದ್ದೂ, ಇತಿಹಾಸದ ದೃಷ್ಟಿಯಿಂದ ಮಾತ್ರ ಪ್ರಮುಖ ಲೇಖಕಿಯಾಗಿ ಉಳಿದರು ರಾಜವಾಡೆ–ಇದು ಕನ್ನಡದ ಮಟ್ಟಿಗೆ, ಲೇಖಕಿಯರ ಕೊಡುಗೆಗೆ ದೊಡ್ಡದೊಂದು ಆಘಾತವೇ ಸೈ.

ಉಡುಪಿಯ ಒಂದು ತಲೆಮಾರಿನ ಜನಕ್ಕೆ ರಾಜವಾಡೆಯವರು ತಮ್ಮ ಜೀವಿತಾವಧಿಯಲ್ಲಿಯೇ ದಂತಕತೆಯಾಗಿದ್ದರು. ಆಕೆಯ ಅಂದ ಚಂದ, ಆಭರಣಗಳನ್ನು ತೊಟ್ಟು ಜರತಾರಿ ಸೀರೆಯುಟ್ಟು ಆಕೆ ರಥಬೀದಿಗೆ ಬರುತ್ತಿದ್ದದ್ದು, ತನ್ನ ಸುಪ್ರಭಾತ ಪತ್ರಿಕೆಗೆ ಚಂದಾ ಎತ್ತಿದ್ದು. ಪ್ರೀತಿ ಬಿರುಸಿನ ದನಿಯಲ್ಲಿ ಪರಿಚಿತರನ್ನೆಲ್ಲ ವಿಚಾರಿಸಿಕೊಳ್ಳುತ್ತಿದ್ದದ್ದು, ಎಲ್ಲ ಈಗಲೂ ನೆನಪಿಸಿಕೊಂಡು ಹೇಳುವವರಿದ್ದಾರೆ. ಆಮೇಲೆ ಏನಾದರು ಅಂತ ಮಾತ್ರ ಅನೇಕರಿಗೆ ಗೊತ್ತಿರಲಿಲ್ಲ. ಹಾಗೆ ಗೊತ್ತೇ ಆಗದಂತೆ ತನ್ನ ಕೊನೆಯ ದಿನಗಳನ್ನು ಜೀವಿಸಿದರು ರಾಜವಾಡೆ. ಎಂತಲೇ ಅವರ ಸಾವಿನ ಸುದ್ದಿ ಕೇಳಿ ಅನೇಕರು "ಅವರು ಇದ್ದಿದ್ದರಾ?" ಅಂತ ಆಶ್ಚರ್ಯ ಪಟ್ಟಿದ್ದರು.

ಮೂರ್ಛಾವಸ್ಥೆಯಲ್ಲಿ ಮಣಿಪಾಲದ ಕೆ.ಎಂ.ಸಿ. ಆಸ್ಪತ್ರೆಯಲ್ಲಿ ಅವರು ಮಲಗಿದ್ದ ಭಂಗಿ ಇನ್ನೂ ಕಣ್ಣಿಗೆ ಕಟ್ಟಿದಂತಿದೆ. ಮುಖದಲ್ಲಿ ಯಾವ ನೋವು ಸಂಕಟವೂ ಇಲ್ಲದ ತೃಪ್ತ ಶಾಂತ ಕಳೆಯಲ್ಲಿ ಆಕೆ ಇಂಟೆನ್ಸಿವ್ ಕೇರ್ ಯೂನಿಟ್‌ನ ತೊಟ್ಟಿಲಿನಂತಹ ಮಂಚದಲ್ಲಿ ಮಲಗಿದ್ದರು. ಮಗ್ಗುಲು ಮಗುಚಿ ಬಲಗೈಯನ್ನು ಚಾಚಿ ಇಳಿಬಿಟ್ಟು, ಅದು ಮಂಚದ ದಂಡೆಗೆ ಮೃದುವಾಗಿ ಬಿಗಿಯಲ್ಪಟ್ಟಿತ್ತು. ಉಸಿರು ಸಶಬ್ದವಾಗಿ ದೀರ್ಘವಾಗಿ ಒಳಹೊರ ಹೋಗುವುದು ತಿಳಿಯುತ್ತಿತ್ತು. ಮೆಲ್ಲ "ರಾಜವಾಡೆ ರಾಜವಾಡೆ" ಎಂದೆ. ಸ್ವಲ್ಪ ಎಚ್ಚರವಿದ್ದರೂ ಥಟ್ಟಂತ ಕುಳಿತು ಮಾತಿಗೆಳೆಸುವ, ಮಾತು ಪ್ರೀತಿಸುವ ಜೀವ ಮೌನ ಮಲಗಿತ್ತು! "ನಾನು ಸಾವಿಗೆ ಹೆದರುವುದಿಲ್ಲರೀ.... (ಒಮ್ಮೊಮ್ಮೆ ಅವರ ಮಾತಿನಲ್ಲಿ 'ರಿ' ಇಣುಕುತ್ತಿತ್ತು, 'ರೀ' ಉಡುಪಿ ಕನ್ನಡದಲ್ಲಿಲ್ಲ. ಅವರು ಕೆಲಕಾಲ ಬೆಂಗಳೂರಿನಲ್ಲಿ ಇದ್ದುದಕ್ಕೆ ಇದೊಂದು ಅವರ ಭಾಷೆಯಲ್ಲಿ ಬೆರೆತೇ ಹೋಗಿತ್ತು,) ಆದರೆ ಸಾಯುವ ರೀತಿಗೆ ಹೆದರುತ್ತೇನೆ. ಅಬ್ಬಾ ದೇವರೇ....ನನಗೆ ನಿದ್ದೆಯಲ್ಲೇ ಜೀವ ಹೋದರೆ ಸಾಕು....ನನ್ನ "ತಾಯಿ" ನನ್ನನ್ನು ನರಳಿಸಲಿಕ್ಕಿಲ್ಲ...."—ಎಂದು ಮಕ್ಕಳಂತೆ ಮೈ ನಡುಗಿಸಿ ನುಡಿದಾಕೆ....ಎಷ್ಟು ಆರೋಗ್ಯವಾಗಿ, ರಾಜವಾಡೆಯವರಿಗೂ ಸಾವು ಇರುತ್ತದೆ ಎಂಬುದೇ ಯಾವತ್ತೂ ಅನಿಸದ ಹಾಗೆ, ಜೀವಂತ ಇದ್ದಾಕೆ....ಹೀಗೆ ನಿದ್ದೆಯಲ್ಲೇ ಹೇಳ ಕೇಳದೆ ಹೋದದ್ದು, ಅಂದರೆ!

1994 ಏಪ್ರಿಲ್ 23 ರಂದು ಎರಡು ದಿನದ ಕೋಮಾವಸ್ಥೆಯ ನಂತರ, ಬಹುಷಃ ಸಾಯುವುದೇ ತಿಳಿಯದಂತಹ ಸ್ಥಿತಿಯಲ್ಲಿ, ಅವರು ನಿಧನರಾದರು. ಆಸ್ಪತ್ರೆಯಲ್ಲಿ ಮೃತದೇಹವನ್ನು ಸರಿಸಿಟ್ಟ ಕೋಣೆಗೆ ಹೋಗಿ ಮುಖದ ಮೇಲಿನ ಮುಸುಕನ್ನು ನಿಧಾನವಾಗಿ ತೆಗೆದೆ. ಅಲ್ಲಿ ಅವರು ಅದುವರೆಗೆ ಘನಸ್ಥಿಕೆಯಿಂದ ವಾಸಿಸಿದ ದೇಹವೆಂಬ ಗೇಹ ತಟಸ್ಥವಿತ್ತು.

"ಏಳಿ ಮಾರಾಯರೆ, ನಾಟಕ ಸಾಕಿನ್ನು"–ಎಂದು ಎಬ್ಬಿಸುವಂತಾಯ್ತು.

ಶ್ರೀಮತಿ ರಾಜವಾಡೆಯವರು ಮಾತಾಡುತ್ತಿದ್ದಂತೆ ನಾನು ಬರಕೊಂಡದ್ದು ಅವರ ಬದುಕಿನ ಒಂದು ಘಟ್ಟದವರೆಗೆ ಮಾತ್ರವಿದೆ. ಮುಂದೆ "ಹುಗಿದ ಹೆಣವನ್ನು ಮೇಲೆತ್ತಬಾರದು" ಎಂಬ ಒಂದೇ ವಾದ ಹೂಡಿ ಅವರು ವಿಷಯ ಬದಲಾಯಿಸುತ್ತಿದ್ದರು. ಹೀಗೆ ಒಳಗಿನ ಘನ ಮೌನವನ್ನು ಕಾಪಾಡಿಕೊಂಡೇ ನಡೆದುಬಿಟ್ಟರು. ★

★ ಚೀನಿ ಕತೆ

# ಪ್ರಸೂತಿ ಗೃಹ

★ ರುಜಿಜುನಾನ

ಸೂರ್ಯಾಸ್ತಮದ ವೇಳೆ. ಆ ಪ್ರಸೂತಿ ಗೃಹದ ಸುತ್ತಲಿನ ಬಣ್ಣ ಬಣ್ಣದ ಹೂವುಗಳು ಮಸುಕಾಗತೊಡಗಿದವು. ಕ್ಷಣದಲ್ಲಿ ಅವು ಕಣ್ಣಿಗೆ ಕಾಣದಂತಾಯಿತು, ಸಂಜೆಯಾಗುತ್ತಿರುವುದಕ್ಕೆ ಪ್ರತೀಕವಾಗಿ.

ಕೋಲಿನ ಎರಡೂ ಬದಿಗೆ ಬಕೆಟ್‌ಗಳನ್ನು ಕಟ್ಟಿಕೊಂಡು ಸೂಲಗಿತ್ತಿ ಟ್ಯಾನ್ (ದಾಯಿ ಟ್ಯಾನ್) ದೊಡ್ಡ ಪಾತ್ರೆಗೆ ನೀರು ತುಂಬಿಸಿದಳು. ಉಸಿರಾಡಲೂ ಸಮಯವಿಲ್ಲದಂತೆ ತನ್ನ ಇಬ್ಬರು ರೋಗಿಗಳಿಗೆ ರಾತ್ರಿ ಊಟ ತಯಾರಿಸಲು ಅನುವಾದಳು. ವಯಸ್ಸಾಗುತ್ತಿದ್ದರೂ ಮಾಮಿ ಟ್ಯಾನ್‌ಗೆ ಕೆಲಸದಲ್ಲಿನ ಉತ್ಸಾಹ ಎಳ್ಳಷ್ಟು ಕುಂದಿರಲಿಲ್ಲ. ಇಡೀ ದಿನ ಬಿಡುವಿಲ್ಲದಂತೆ ಕೆಲಸ ಮಾಡುವಷ್ಟು ಶಕ್ತಿಯನ್ನು ಉಳಿಸಿಕೊಂಡಿದ್ದಳು. ಊಟದ ತಯಾರಿ ಮುಗಿಯುತ್ತಿದ್ದಂತೆ ಮಧ್ಯದ ಕೋಣೆಗೆ ಹೋದಳು. ದೀಪ ಹಚ್ಚಿದಾಗ ಇಡೀ ಕೋಣೆ ವಿಶಾಲವಾಗಿ ಕಾಣತೊಡಗಿತು. ಇದೇ ಕೋಣೆ ಅವಳಿಗೆ ಕಚೇರಿಯಾಗಿತ್ತು; ಇದೇ 'ಲೇಬರ್ ವಾರ್ಡ್' ಕೂಡಾ ಆಗಿತ್ತು. ಹಾಸಿಗೆ ಮೇಲೆ ಹಾಸಿದ್ದ ಹಾಲು ಬಣ್ಣದ ಹಾಸು ಬಟ್ಟೆ, ಬಿಳೀ ಪರದೆ, ಬಿಳಿ ಮೇಜು, ಬಿಳಿಗೋಡೆ....ಎಲ್ಲವೂ ಸ್ವಚ್ಛತೆಗೆ ಪ್ರತೀಕವಾಗಿತ್ತು. ಏನೋ ನೆನಪಾಗಿ ಅಲ್ಲೇ ಇದ್ದ ಸ್ಟೌವ್ ಹಚ್ಚಿ ನೀರು ಇಟ್ಟು ಪ್ರಸೂತಿ ಕಾರ್ಯಕ್ಕೆ ಅಗತ್ಯವಾದ ಉಪಕರಣಗಳನ್ನು ಅದರಲ್ಲಿ ಹಾಕಿದಳು. (ಸ್ಟರ್‌ಲೈಸೇಷನ್).

ಅವಳ ರೋಗಿಗಳು ಇನ್ನೂ ನಿದ್ರಿಸುತ್ತಿದ್ದರು. ದೀಪ ಆರಿಸಿದಳು. ದೂರದಲ್ಲಿ, ಕತ್ತಲಲ್ಲಿ ಧ್ವನಿಗಳು ಕೇಳಿ ಬರುತ್ತಿದ್ದವು. ಆಟದ ಮೈದಾನದಲ್ಲಿ ಮಕ್ಕಳ ಉತ್ಸಾಹದ ಬುಗ್ಗೆ ಹರಿದಿತ್ತು. ಈ ಶಬ್ದಗಳೆಲ್ಲ ದಾಯಿ ಟ್ಯಾನ್‌ಗೆ ತೃಪ್ತಿ ನೀಡಿದವು.

ದೇಶ ವಿಮೋಚನೆಗೊಂಡಾಗ ಹಳ್ಳಿಯಲ್ಲಿ ಯಾರು ತಾನೆ ಸ್ಟರ್‌ಲೈಸೇಷನ್, ಪ್ರಸೂತಿ ಗೃಹ ಅಥವಾ ವಿದ್ಯುತ್ ದೀಪದ ಬಗೆಗೆ ಅರಿತಿದ್ದರು. ಆ ದಿನಗಳಲ್ಲಿ ಹೆರಿಗೆ ಎಂದರೆ ಸಾವಿನ ಹಾದಿಯಲ್ಲಿ ಸಾಗಿ ಬರುವುದೇ ಆಗಿತ್ತು. 1956ರವೇಳೆಗೆ ಕೃಷಿ ಸಹಕಾರಿ ರೂಪುಗೊಂಡಾಗ, ಈಗ ಪಕ್ಷದ ಕಾರ್ಯದರ್ಶಿಯಾಗಿರುವ ಅಧ್ಯಕ್ಷಡೂ ಅವರು ಟ್ಯಾನ್‌ಳನ್ನು ಪಟ್ಟಣದ ಆಸ್ಪತ್ರೆಗೆ ಕಳುಹಿಸಿದ್ದರು. ಪ್ರಸೂತಿ ಶಾಸ್ತ್ರದಲ್ಲಿ ಹೊಸ ಬಗೆ ಹೆರಿಗೆ ವಿಧಾನಗಳನ್ನು ಅರಿತುಕೊಂಡು ಬರುವುದೇ ಅದರ ಉದ್ದೇಶ. ಆದರೆ ಹೊಸ ವಿಧಾನವನ್ನು ಜನಪ್ರಿಯಗೊಳಿಸುವ ಕೆಲಸ ಮಾತ್ರ ಸುಲಭಸಾಧ್ಯವಾಗಿರಲಿಲ್ಲ. ಗರ್ಭಿಣಿಯರು ಮತ್ತು ಅವರ ಕುಟುಂಬದವರು ಇದರಲ್ಲಿ ನಂಬಿಕೆ ತೋರಿಸಲಿಲ್ಲ. ಹಳೇ ಪದ್ಧತಿಯ ಸೂಲಗಿತ್ತಿಯರು ಅವಳ ಬಗ್ಗೆ ಅಪಪ್ರಚಾರ ಮಾಡತೊಡಗಿದರು. ಹೊಸ ವಿಧಾನದಲ್ಲಿ ಅವಳಿಗೆ ಅನುಭವ ಕೂಡ ಕಡಿಮೆಯಾಗಿತ್ತಲ್ಲ? ಹೀಗಾಗಿ ಕೆಲಸ ಇನ್ನಷ್ಟು ಕ್ಲಿಷ್ಟವಾಗಿತ್ತು. ಒಮ್ಮೆ ತೀರಾ ಹತೋಟಿ ಮೀರಿದ್ದ ರೋಗಿ ಆಸ್ಪತ್ರೆಗೆ ಬಂದಳು. ಮಗು ಸತ್ತಿತು. ಇದು ದಾಯಿ ಟ್ಯಾನ್‌ಗೆ ಪ್ರತಿಕೂಲವಾಯಿತು. ಹಳೆಯ ಕಾಲದ ಸೂಲಗಿತ್ತಿ ಗ್ರ್ಯಾನಿ ಪ್ಯಾನ್ ಎಲ್ಲರ ಬಳಿ ಮಗುವನ್ನು ಟ್ಯಾನ್ ಕೊಂದಿದ್ದು ಎಂದೇ ಹೇಳ ತೊಡಗಿದಾಗ ಟ್ಯಾನ್ ಅವಮಾನದಿಂದ ಬೆಂದು ಹೋದಳು. ಮನೆಯಲ್ಲೇ ಕೂತು ದುಃಖಿಸಿದಳು. ಎಷ್ಟೋ ಸೂಲಗಿತ್ತಿಯರ ಬಳಿ ಎಷ್ಟೋ ಮಕ್ಕಳು ಸಾಯುತ್ತವೆ. ಆದರೆ ಅದನ್ನು ದುರಾದೃಷ್ಟವೆಂದು ಜನ ಸುಮ್ಮನಾಗಿಬಿಡುತ್ತಿದ್ದರು. ಈಗ ಟ್ಯಾನ್ ಮಾಡಿದ ಪಾಪವಾದರೂ ಏನು? ಅವಳು ಅಧ್ಯಕ್ಷಡೂ ಅವರ ಬಳಿ ಹೋಗಿ ಕಣ್ಣೀರಿಟ್ಟಳು. "ದಾಯಿ ನಮ್ಮ ಮುಂದೆ ಗುರುತರವಾದ ಹೊಣೆ ಇದೆ, ನಾವು ಸಮಾಜವನ್ನು ಬದಲಿಸೋಣ. ಮತ್ತೆ ಮತ್ತೆ ಬದಲಿಸುತ್ತಲೇ ಇರೋಣ. ಕ್ಷಿಪ್ರ ವೇಗದಲ್ಲಿ ಬೆಳವಣಿಗೆಗಳು ಆಗಿವೆ. ಆದರೆ ಹಳೇ ಪದ್ಧತಿ ಸುಲಭದಲ್ಲಿ ಸಾಯುವುದಿಲ್ಲ. ನಮ್ಮ ಕೆಲಸ, ನಮ್ಮ ಅಧ್ಯಯನ ಕ್ರಾಂತಿ ಮಾಡುವುದೇ ಆಗಿದೆ. ಮಾಡಲಾಗದ್ದನ್ನು ಕಲಿಯೋಣ. ಅರ್ಥವಾಗದ್ದನ್ನು ಪತ್ತೆ ಹಚ್ಚಲು ಯತ್ನಿಸೋಣ" ಎಂದು ಅವಳನ್ನು ಆತ ಸಮಾಧಾನ ಮಾಡಿದರು.

ಇದಾದ ಮೇಲೆ ಪ್ರಸೂತಿ ಗೃಹ ಸ್ಥಾಪನೆ ಬಗೆಗೆ

ಡೂ ಅವರು ಪ್ರಕಟಿಸಿ ಮೂರು ಕೋಣೆಗಳ ಸ್ಥಳ ವನ್ನು ಒದಗಿಸಿಬಿಟ್ಟರು. ಟ್ಯಾನ್ ಅದನ್ನು ಅತ್ಯಂತ ಶುಭ್ರವಾದ ಗೃಹವಾಗಿ ಮಾಡಿದಳು. ಹೆರಿಗೆ ಕೋಣೆ ಯನ್ನು ತನ್ನ ಕೈಯಾರೆ ಸಿದ್ಧಪಡಿಸಿದಳು. 35 ವರ್ಷಕ್ಕೇ ವಿಧವೆಯಾದ ಟ್ಯಾನ್ ಜೀವನದಲ್ಲಿ ದುಃಖ ಉಂಡವಳು. ಆದರೆ ಈ ಪ್ರಸೂತಿ ಗೃಹ ಸಿದ್ಧ ವಾದಾಗ ಅವಳಿಗೆ ತನ್ನ ಸ್ವಂತ ಜೀವನವೇ ಮರೆತು ಹೋಯಿತು. ಪುಟ್ಟ ಹುಡುಗಿಯಂತೆ ಓಡಾಡಿ ಬಿಟ್ಟಳು.

ಆಸ್ಪತ್ರೆಯಂತೆಯೇ ಇದ್ದ ಈ ಪ್ರಸೂತಿ ಗೃಹ ದಲ್ಲಿ ಟ್ಯಾನ್ ಇಂಜಕ್ಷನ್, ಗರ್ಭಿಣಿಯರ ಪರೀಕ್ಷೆ, ರಕ್ತದ ಒತ್ತಡ ನೋಡುವ, ರಕ್ತದ ಮಾದರಿ ತೆಗೆವ, ಹೊಲಿಗೆ ಹಾಕುವ ಮತ್ತು ತೆಗೆಯುವುದನ್ನು ಕಲಿತಳು. ಸಣ್ಣಪುಟ್ಟ ಶಸ್ತ್ರ ಚಿಕಿತ್ಸೆಗೆ ಪಟ್ಟಣದ ವೈದ್ಯರನ್ನು ಕರೆದು ತಾನು ಅವರಿಗೆ ಸಹಾಯಕ್ಕೆ ನಿಲ್ಲುತ್ತಿದ್ದಳು. ಅವಳ ಕಾರ್ಯ ನೈಪುಣ್ಯತೆ ಕಂಡು ವೈದ್ಯರು ಬೆರ ಗಾಗುತ್ತಿದ್ದರು ; ಸಣ್ಣ ಶಸ್ತ್ರ ಚಿಕಿತ್ಸೆ ಮಾಡೆಂದು ಪ್ರೋತ್ಸಾಹಿಸುತ್ತಿದ್ದರು. ಅದಕ್ಕೆಲ್ಲಾ ಅವಳ ಮುಗು ಳ್ನಗೆ ಉತ್ತರವಾಗಿತ್ತು.

ಹೊರಬಾಗಿಲ ಶಬ್ದ ಜೋರಾಗಿ ಕೇಳಿದಾಗ ಟ್ಯಾನ್ ಎಚ್ಚೆತ್ತಳು. ದೀಪ ಹಾಕಿದಾಗ ಕಂದು ಬಣ್ಣದ ಯುವತಿ ನಿಂತಿದ್ದಳು. ಅವಳ ಭುಜದ ಮೇಲೆ ಹಾಸಿಗೆ ಸುರುಳಿ ಇತ್ತು. ಒಂದು ತೋಳಿನ ಕೆಳಗೆ ಆಮ್ಲಜನಕ ಸಿಲಿಂಡರ್ ಇತ್ತು. ಅವಳ ಮುಖದಲ್ಲಿ ಉತ್ಸಾಹ ಚಿಮ್ಮುತ್ತು.

"ನಾನು ಯಾರು ಗೊತ್ತಾ, ದಾಯಿ (ಆಂಟಿ)?"

"ಓಹ್ ! ನೀನು....ಹೆಮಿ....!"

ಪಟ್ಟಣದಲ್ಲಿ ಪ್ರಸೂತಿ ವಿಜ್ಞಾನದಲ್ಲಿ ಆಗಷ್ಟೇ ಪದವಿ ಪಡೆದು ಬಂದಿದ್ದಳು ಹೆಮಿ. ಅವಳು ಟ್ಯಾನ್‌ನ ಸ್ನೇಹಿತೆ ಶ್ರೀಮತಿ ಜಂಗ್ ಮಗಳು. ಹೆಮಿಯನ್ನು ನೋಡಿ ಆನಂದದಿಂದ ಮುಖವರಳಿಸಿದ ಟ್ಯಾನ್, ಅವಳ ಹೊರೆ ಇಳಿಸಲು ನೆರವಾದಳು.

"ಈ ಪ್ರಸೂತಿ ಗೃಹದಲ್ಲಿ ಕೆಲಸ ಮಾಡಲು ನನಗೆ ಆದೇಶವಾಗಿದೆ" ಎಂದು ಹೇಳುತ್ತಾ, ಹೆಮಿ ಅಲ್ಲಿನ ವಿವರ ಕೇಳತೊಡಗಿದಳು. ಕೆಲಸದಲ್ಲಿನ ಅವಳ ಆಸಕ್ತಿ ಕಂಡು ಟ್ಯಾನ್‌ಗೆ ತೃಪ್ತಿಯಾಯಿತು. ನೀನು ಬಂದದ್ದು ಒಳ್ಳೆಯದಾಯಿತು. ನೀನು ನನ್ನ ಬಲಗೈ ಆಗುವೆ. ನಮ್ಮ ಬಗೆಗೆ ನಿನಗೆ ಗೊತ್ತಿರಬಹುದು. ಎಲ್ಲ ಗರ್ಭಿಣಿಯರನ್ನು ನೋಡಿಕೊಳ್ಳುವುದೇ ನಮ್ಮ ಕೆಲಸ. ಶ್ರೀಮತಿ ಜುವು ಆಗಾಗ್ಗೆ ಸಹಾಯ ಮಾಡು ತ್ತಾರೆ. ಈ ಪ್ರಸೂತಿ ಗೃಹ ಶುರುವಾಗಿ ಎರಡು ವರ್ಷವಾಗಿದೆ. 356 ಹೆರಿಗೆ ಮಾಡಲಾಗಿದೆ. ಎಲ್ಲ ಮಕ್ಕಳೂ ಸುರಕ್ಷರತೆಯಿಂದ ಇವೆ, ಇಂದಿಗೂ, ಇವೆಲ್ಲಾ ಸುಲಭವಾದುದಲ್ಲ. ಏನೂ ದುರಂತವಾಗ ದಂತೆ ನೋಡಿಕೊಂಡಿದ್ದೇವೆ. ತಾಯಿ–ಮಗುವಿಗೆ ಏನೂ ತೊಂದರೆಯಾಗಿಲ್ಲ. ಮಹಿಳೆ ಇಲ್ಲಿಗೆ ಒಂಟಿ ಯಾಗಿ ಬರ್ತಾಳೆ. ಆದರೆ ತೋಳಲ್ಲಿ ಮಗುವನ್ನು ಮಲಗಿಸಿಕೊಂಡು ಹೋಗ್ತಾಳೆ...."

ಟ್ಯಾನ್ ಉತ್ಸಾಹದಿಂದ ಹೆಮಿಗೆ ಎಲ್ಲೆಡೆ ತೋರಿಸಿದಳು. "ದಾಯಿ ಟ್ಯಾನ್, ಯಾವಾಗ ಲಾದರೂ ಕಷ್ಟದ ಹೆರಿಗೆ...." "ಕಷ್ಟದ್ದಾ ! ಅಲ್ಲೇ ಆತಂಕ ಉಂಟಾಗುವುದು. ಸ್ವಲ್ಪ ಸಮಸ್ಯೆ ಕಂಡು ಬಂದರೂ ಆಂಬ್ಯುಲೆನ್ಸ್‌ಗೆ ಫೋನ್ ಮಾಡಬೇಕು."

"ಸಮಯ ಇಲ್ಲದಿದ್ದರೆ ?"

"ವೈದ್ಯರನ್ನು ಕರೆಸುವುದು...."

"ನಾವು ಎಲ್ಲಿ ಕೈ ತೊಳೆಯೋಣ ?" ಎಂದು ಹೆಮಿ ದಿಢೀರನೆ ಕೇಳಿದಳು.

"ಕೈ ತೊಳೆಯೋದಾ ?" ಟ್ಯಾನ್ ಸ್ವಲ್ಪ ಗಲಿ ಬಿಲಿಗೊಂಡಳು....ನಂತರ "ಯಾಕೆ, ವಾಶ್‌ಬೇಸಿನ್ ನಲ್ಲಿ...."ಎಂದಳು. ಅವಳು ಹೆರಿಗೆಗೆ ಬಳಸುವ ಉಪ ಕರಣಗಳನ್ನು ತೋರಿಸಿದಳು. ಹೆಮಿಗೆ ಅದು ಆಸಕ್ತಿ ಉಂಟು ಮಾಡಲಿಲ್ಲ. "ಪಟ್ಟಣದ ಆಸ್ಪತ್ರೆಗೆ ಹೋಲಿಕೆ ಎಲ್ಲಿ ?" ಎಂದು ಟ್ಯಾನ್ ಸ್ವಲ್ಪ ಗಂಭೀರ ವಾಗಿ ಹೇಳಿದಾಗ, "ಅದು ಸರಿ" ಎಂದು ಸರಳವಾಗಿ ಹೆಮಿ ಉತ್ತರಿಸಿದಳು. ಅವಳು ಕಿಟಕಿ ತೆರೆದು ಕತ್ತ ಲಲ್ಲಿ ಬಗ್ಗಿ ನೋಡಿದಳು. ಮರುಕ್ಷಣದಲ್ಲಿ ಏನೋ ಹುಡುಕುವಂತೆ ಅವಳು ಹೊರಗೆ ಓಡಿದಳು.

ಟ್ಯಾನ್‌ಗೆ ಏನೂ ಅರ್ಥವಾಗಲಿಲ್ಲ, ತನ್ನ ಆಸ್ತಿ ತುಂಬಿದ್ದ ಟೇಬಲ್ ಡ್ರಾಯರ್‌ಗಳನ್ನು ಮುಚ್ಚ ತೊಡಗಿದಳು. "ಈ ಹುಡುಗಿಗಾಗಿ ಸಮಯ ಹಾಳು ಮಾಡಿಕೊಳ್ಳುತ್ತಿರುವೆ" ಎಂದು ನಿಟ್ಟುಸಿರು ಬಿಟ್ಟಳು.

"ದಾಯಿ, ನಾನು ಕಂಡುಹಿಡಿದೆ" ಎಂದು ಉತ್ಸಾಹದಿಂದ ಓಡಿ ಬಂದ ಹೆಮಿ, "ನಾನು ಮನೆ ಬಳಕೆ ನೀರು ವ್ಯವಸ್ಥೆಯೊಂದನ್ನು ಮಾಡಿಕೊಳ್ಳ ಬಹುದು. ಮಕ್ಕಳಿಗೆ ಹರಿವ ನೀರಿನ ವ್ಯವಸ್ಥೆ ಅಗತ್ಯ ಅಲ್ಲವೆ ? ನಾನು ನೋಡಿದೆ....ಈ ಪ್ರಸೂತಿ ಗೃಹಕ್ಕೆ

ಅದರ ಅಗತ್ಯ ಹೆಚ್ಚು. ಬಾವಿ ಎಷ್ಟು ಹತ್ತಿರದಲ್ಲಿ ಇದೆ....ಗೋಡೆಯಲ್ಲಿ ರಂಧ್ರ ಕೊರೆದರೆ ಸಾಕು...."

ಅವಳನ್ನೇ ದಿಟ್ಟಿಸಿ ನೋಡಿದ ಟ್ಯಾನ್, "ಬಾ, ಮಲಗುವಂತೆ" ಎಂದು ಅವಳನ್ನು ಒಳಗೆ ಕರೆದೊಯ್ದಳು.

ಹೆಮಿ ಬಗೆಗೆ ಟ್ಯಾನ್ ಯೋಚಿಸತೊಡಗಿದಳು. ಅವಳ ಜತೆಗಿನ ಚರ್ಚೆ ಸಮಾಧಾನ ಕೊಟ್ಟಿರಲಿಲ್ಲ. ಅವಳ ಪ್ರಶ್ನೆಗಳೊ....ಟ್ಯಾನ್‌ಗೆ ಗೊಂದಲ ಉಂಟು ಮಾಡಿದವು. "ಈ ಪೀಳಿಗೆಯೇ ಅಷ್ಟು....ಹುಟ್ಟು ವಾಗಲೇ ಎಲ್ಲಾ ಅನುಕೂಲವಿರುತ್ತೆ, ನಮ್ಮ ಕಾಲದ ತರಹ ಅಲ್ಲ....ಏನೇನೊ ಯೋಚಿಸುತ್ತಾ ಟ್ಯಾನ್ ಒಳಗೆ ಬಂದಾಗ ಹೆಮಿ ಮಲಗುವ ಸಿದ್ಧತೆ ನಡೆಸಿದ್ದಳು. "ನಿನ್ನ ತರಬೇತಿ ಮುಗೀತೂಂತ ನಿನ್ನ ಅಮ್ಮನಿಗೆ ಖುಷಿಯಾಗಿರಬಹುದು."

"ಹೌದು," ಎಂದಳು ಹೆಮಿ.

"ಮಗು....ಇದು ಸುಲಭದ್ದಾಗಿರಲಿಲ್ಲ....ಈಗ ಪ್ರಸೂತಿ ಗೃಹಗಳೇ ಇವೆ. ಆದರೆ ಹಿಂದೆ ಹೆರಿಗೆ ಎಂದರೆ ಪುನರ್‌ಜನ್ಮದಂತೆ. ಹೆಂಗಸಿನ ಆಗಿನ ಪಾಡನ್ನು ನಿಮಗೆ ಊಹಿಸುವುದೂ ಸಾಧ್ಯವಿಲ್ಲ. ಆದರೆ ಈಗ ನೀವು, ಯುವಜನರು, ಪ್ರತಿಯೊಂದರಲ್ಲಿಯೂ ತಪ್ಪು ಕಂಡುಹಿಡಿಯುವುದರಲ್ಲಿಯೇ ಇದ್ದೀರ. ಸುಖಕರ ಬದುಕಿನ ಕಲ್ಪನೆ ನಮಗಿರಲಿಲ್ಲ. ಬದುಕು ಬರೀ ತಮಾಷೆ ಎಂದು ನೀವು ಭಾವಿಸಬಾರದು."

"ನೀನು ಹೇಳಿದ್ದು ಸರಿ, ಆಂಟಿ" ಎಂದು ಹೆಮಿ ಒಪ್ಪಿಕೊಂಡಳು. ತನ್ನ ಮಾತು ಪರಿಣಾಮ ಬೀರುತ್ತಿರುವುದನ್ನು ಕಂಡು ಟ್ಯಾನ್‌ಗೆ ಸಮಾಧಾನವಾಯಿತು. "ಮೊದಲು ದೀಪ ಕೂಡ ಇರಲಿಲ್ಲ....ಹಾಗೇ ಅನುಕೂಲಗಳು ಕಾಲ ಕ್ರಮೇಣ ಬರುತ್ತವೆ...." ಟ್ಯಾನ್ ಮಾತು ಹೆಮಿಗೆ ಕೇಳಿಸಿತೊ, ಇಲ್ಲವೊ....ಅವಳ ತಲೆ ದಿಂಬಿನ ಮೇಲಿತ್ತು, ಮೋಟು ಜಡೆ ಮಾತ್ರ ಅಲ್ಲಾಡುತ್ತಿತ್ತು. ನಿದ್ರೆ ಬಂತೇನೊ ಎಂದುಕೊಂಡಾಗ, "ನಾಳೆ ಬೆಳಿಗ್ಗೆ ನೀರಿನ ವ್ಯವಸ್ಥೆ ಮಾಡೋಣ...." ಎಂದು ಹೆಮಿ ಹೇಳಿದಾಗ, ಕನಸಿನಲ್ಲಿಯೂ ಇದೇನಾ ಎಂದು ಟ್ಯಾನ್ ನಕ್ಕು ದೀಪವಾರಿಸಿ ನಡೆದಳು.

ಬೆಳಗ್ಗೆ ಎದ್ದಾಗ ಟ್ಯಾನಿಗೆ ಕಿರಿ ಕಿರಿಯಾಯಿತು. ಹೆಮಿ ಆಗಲೇ ಎದ್ದು ಇಬ್ಬರು ರೋಗಿಗಳಿಗೆ ವ್ಯಾಯಾಮ ಮಾಡಿಸುತ್ತಿದ್ದಳು. ಮೂವರು ಬೆನ್ನು ಬಾಗಿಸಿ, ಕಾಲು ಎತ್ತಿ ಸಂತೋಷದಿಂದ ಇರುವಂತೆ ಕಂಡಿತು. ಹೆರಿಗೆ ನಂತರದ ವ್ಯಾಯಾಮದಲ್ಲಿ ಅತಿಶಯವೇನಿಲ್ಲ. ಪಟ್ಟಣದ ಆಸ್ಪತ್ರೆಗಳಲ್ಲಿ ಅದನ್ನು ಅಳವಡಿಸುವ ವಿಚಾರ ಅವಳಿಗೆ ಇರಲಿಲ್ಲ. ಮಹಿಳೆ, ಅದರಲ್ಲೂ ಆಗ ತಾನೇ ತಾಯಾಗಿರುವವಳು ಹಾಗೆ ಕೈ-ಕಾಲು ಅಲ್ಲಾಡಿಸುವುದನ್ನು ನೋಡುವುದು ಅವಳಿಗೆ ಅಸಾಧ್ಯವಾಗಿತ್ತು. ಅಂಥ ಗಾಂಭೀರ್ಯ ಇಲ್ಲದ ಕ್ರಿಯೆ ಅವಳಿಗೆ ಇಷ್ಟವಾಗುತ್ತಿರಲಿಲ್ಲ. ಜತೆಗೆ ಹಳ್ಳಿಯ ಜನರು ಮಗು ಹುಟ್ಟಿದ ಮೇಲೆ ನಿದ್ರೆ ಮತ್ತು ಆರಾಮ ತಾಯಿಗೆ ಅಗತ್ಯ ಎಂದು ಭಾವಿಸಿದ್ದರು. ವ್ಯಾಯಾಮ ಅವರ ಮನಸ್ಸಿಗೇ ಬಂದಿರಲಿಲ್ಲ. ಆದರೆ ಇಲ್ಲಿ, ಹೆಮಿ ಬಂದ ಮರುದಿನವೇ ಆಸ್ಪತ್ರೆ ಪದ್ಧತಿಯನ್ನು ಆರಂಭಿಸಿದ್ದಾಳೆ. ತನಗೆ ಹೇಳೂ ಇಲ್ಲ ಎಂದೆನಿಸಿತು, ಟ್ಯಾನಿಗೆ. "ಔಷಧಕ್ಕಿಂತ ಇದು ಒಳ್ಳೇದು" ಎಂದು ಹೆಮಿ ಹೇಳಿದಾಗ, "ಹೌದು.... ಮಲಗೋದಕ್ಕಿಂದ ಇದು ಖುಷಿ ಕೊಡುತ್ತೆ" ಎಂದು ಆ ತಾಯಂದಿರೂ ಹೇಳಿದಾಗ, "ನಿಮಗಿಷ್ಟವಾದರೆ ಸರಿ" ಎಂದು ಟ್ಯಾನಿ ಬಲವಂತದ ನಗೆ ನಕ್ಕು ಹೊರ ನಡೆದಳು.

ಬೆಳಗಿನಿಂದ ರಾತ್ರಿವರೆಗೆ ಓಡಾಡುವುದು ಟ್ಯಾನಿಯ ಅಭ್ಯಾಸ. ಒಂದಲ್ಲ ಒಂದು ಕೆಲಸ ಮಾಡುತ್ತಿರುತ್ತಾಳೆ, ಅವಳು. ವಾರ್ಡಿನಿಂದ ಬಂದ ನಗೆಯ ಬುಗ್ಗೆ ಕಿವಿಗೆ ಬಿದ್ದಾಗ ಅವಳ ದಿನಚರಿಯೇ ಬದಲಾಗಿ ಹೋಯಿತು. ಏಕೊ ಅನ್ಯಮನಸ್ಕಳಾದಳು. ಹೊಸ ಗಾಳಿಯೊಂದು ನಿಃಶಬ್ದವಾಗಿದ್ದ ಪ್ರಸೂತಿ ಗೃಹದಲ್ಲಿ ಬೀಸಿ ಅಲ್ಲಿನ ಶಾಂತಿ ಮತ್ತು ವ್ಯವಸ್ಥೆಯನ್ನು ಕದಡುತ್ತಿರುವಂತೆ ಕಂಡಿತು. ಅಲ್ಲಿರಲಾಗಲಿಲ್ಲ, ನೆಪ ಹೂಡಿ ತನ್ನ ಬಿದಿರಿನ ಚೀಲ (ಬ್ಯಾಸ್ಕೆಟ್) ಹಿಡಿದು ಮೊಟ್ಟೆ ತರಲು ಪೇಟೆಯತ್ತ ನಡೆದಳು. ಹತಾಸೆ ಭಾವನೆ, ಯಾಕೆ ಹೀಗಾದೆ ಎಂದು ಪ್ರಶ್ನಿಸಿಕೊಳ್ಳತೊಡಗಿದಳು. "ವಯಸ್ಸಾಗುತ್ತಿರುವಂತೆ ಅತೃಪ್ತಿ ಹೆಚ್ಚಾಗುತ್ತಿದೆ. ನಾನು ಯಾಕೆ ಹೀಗೆ ಅಸಮಾಧಾನಪಟ್ಟುಕೊಳ್ಳಬೇಕು? ಎಂದು ಕೇಳಿಕೊಳ್ಳತೊಡಗಿದಳು.

ನಡೆಯುತ್ತಿದಂತೆ ಜನರ ಚಟುವಟಿಕೆ ಕಂಡು ಬಂದಿತು. ಟ್ಯಾನ್ ಎಲ್ಲರಿಗೂ ಪರಿಚಿತಳು. ತಮ್ಮ ಮಕ್ಕಳ ಬಗ್ಗೆ ಎಷ್ಟೋ ಜನ ಅವಳಿಗೆ ಕೇಳಿಕೊಂಡರು. ಟ್ಯಾನ್‌ಗೆ ಸ್ವಲ್ಪ ಸಮಾಧಾನವಾಯಿತು. ಜನರ ಪ್ರೀತಿಯಿಂದ ಹೃದಯ ತುಂಬಿ ಬಂದಿತು. ಅಲ್ಲೇ ಇದ್ದ ಕೊಳದ ಬಳಿ ಗ್ರ್ಯಾನಿಪಾನ್ ನಿಂತಿದ್ದಳು. ಟ್ಯಾನಿ

ಅಲ್ಲಿ ಹೋಗಿ ನೋಡಿದಾಗ, ಗ್ರ್ಯಾನಿ ಕಪ್ಪೆ ಹಿಡಿಯುತ್ತಿದ್ದಳು. "ಇಲ್ಲ, ನನ್ನ ಕೋಳಿಗಳಿಗೆ" ಎಂದು ಗ್ರ್ಯಾನಿ ಹೇಳಿದಾಗ, ಟ್ಯಾನಿಗೆ ಆಶ್ಚರ್ಯವಾಯಿತು. "ಕಪ್ಪೆ ತಿಂದು ನಿನ್ನ ಕೋಳಿ ಹಾಳಾಗುತ್ತೆ, ಅಷ್ಟೆ." ಅವಳನ್ನೇ ನೋಡಿದ, ಗ್ರ್ಯಾನಿ, "ಸ್ಪರ್ಧೆ ಇದೆ ಗೊತ್ತಾ? ಕೋಳಿಗಳನ್ನು ಚೆನ್ನಾಗಿ ನೋಡಿಕೊಂಡರೆ ತಾನೆ ಅವು ಹೆಚ್ಚು ಮೊಟ್ಟೆ ಇಡೋದು...." ಎಂದಳು.

ಈ ವಯಸ್ಸಿನಲ್ಲಿ ಗ್ರ್ಯಾನಿಯ ಉತ್ಸಾಹ ಕಂಡು ಟ್ಯಾನ್‌ಗೆ ಆಶ್ಚರ್ಯವಾಯಿತು. ಅವಳಲ್ಲಿ ಆಗಿರುವ ಬದಲಾವಣೆಯನ್ನು ಟ್ಯಾನ್ ಗಮನಿಸಿದಳು. ಬಹಳ ಹಳೆಯ ಕಾಲದ ಕಾಲದ ಗ್ರ್ಯಾನಿ ಹೊಸ ಗಾಳಿಗೆ ಮೈಯೊಡ್ಡಿರಲಿಲ್ಲ. ಆದರೆ ಅದೇ ಗ್ರ್ಯಾನಿ ಇಂದು ... ಅವಳ ಆ ಹೆಮ್ಮೆಯ ಮುಖ, ಪ್ರೀತಿಯ ಮಾತು ಕೇಳಿ ಟ್ಯಾನ್ ಮೂಕಳಾದಳು. ಮನದಲ್ಲಿ ಗಲಿಬಿಲಿ. ಗ್ರ್ಯಾನಿಪಾನ್ ಬದಲಾಗಿಬಿಟ್ಟಿದ್ದಾಳೆ....ಸಂತೋಷ, ಗೊಂದಲ ಒಮ್ಮೆಲೆ ಉಂಟಾಯಿತು.

ಮನೆಗೆ ಮರಳುವಾಗಿ ಅವಳು ಮತ್ತೆ ಚಿಂತೆಯತ್ತ ವಾಲಿದಳು. ಜಗತ್ತು ಬದಲಾವಣೆಯ ಹಾದಿಯಲ್ಲಿದೆ. ಇಂದು ಸೈಕಲ್ ಓಡಿಸುವವ ನಾಳೆ ಟ್ರ್ಯಾಕ್ಟರ್ ಚಾಲಕನಾಗುತ್ತಾನೆ. ಕೈಯಿಂದ ಹೊಲ ಉಳುವವ ನಾಳೆ ಯಂತ್ರ ಬಳಸಬಹುದು. ಸಾಂಪ್ರದಾಯಿಕವಾಗಿ ಕೋಳಿ ಸಾಗಣೆ ಮಾಡುತ್ತಿದ್ದ ಗ್ರ್ಯಾನಿ ಈಗ ಅದರ ಪೋಷಣೆಗೆ ಬೇರೆಯದೇ ವಿಧಾನ ಬಳಸುತ್ತಾಳೆ. ಹೌದು, ನಮ್ಮ ಸುತ್ತಮುತ್ತ ಬದಲಾವಣೆಯ ಗಾಳಿ ಬಲವಾಗಿ ಬೀಸುತ್ತಿದೆ.

ಪ್ರಸೂತಿ ಗೃಹಕ್ಕೆ ಟ್ಯಾನ್ ವಾಪಸಾದಾಗ, ಅಲ್ಲಿನ ಸ್ಥಿತಿ ನೋಡಿ ಅಲ್ಲೇ ನಿಂತು ಬಿಟ್ಟಳು. ತುಂಬಾ ಸ್ವಚ್ಛವಾಗಿ ಇಟ್ಟಿದ್ದ ಅವಳ ಕಚೇರಿ ಈಗ ಬಿದಿರಿನ ಚೂರು ಮತ್ತು ದೂಳಿನಿಂದ ತುಂಬಿತ್ತು. ಮೇಜು, ಕುರ್ಚಿ ಎಲ್ಲಾ ತಲೆಕೆಳಗಾಗಿದ್ದವು. ಬಿದುರಿನ ತೂಬು ಕಂಡು ಬಂದಿತು. ಬಾಗಿಲ ಹೊರಗೆ ಬೆಂಕಿ ಹಚ್ಚಲಾಗಿತ್ತು. ಸುಂದರವಾಗಿದ್ದ ಗೋಡೆಗೆ ರಂಧ್ರ ಕೊರೆಯಲಾಗಿತ್ತು. ಅದಕ್ಕೆ ಎರಡು ಬಿದಿರಿನ ತೂಬುಗಳನ್ನು ಸಂಪರ್ಕಿಸಲು ಹೆಮಿ ನಿಂತಿದ್ದಳು.

ಬಾವಿಯಿಂದ ನೀರನ್ನು ಪಾತ್ರೆಗಳಲ್ಲಿ ತರುವ ತ್ರಾಸ ತಪ್ಪಿಸಲು ಹೆಮಿ ಯತ್ನಿಸಿದ್ದಳು. ಬಿದಿರಿನ ಕೊಳವೆ (ತೂಬು) ಮೂಲಕ ಅವಳು ಒಳಗಡೆಗೆ ನೀರು ತರಲು ಪ್ರಯತ್ನಿಸಿದ್ದಳು. ಟ್ಯಾನ್ ಬಂದದ್ದನ್ನು ಕಂಡು, "ಬನ್ನಿ....ಹರಿವ ನೀರು ನೋಡಿ!" ಎಂದು ಕೂಗಿದಳು. "ಹರಿವ ನೀರು ?...." ಸುಸ್ತಾಗಿ ಟ್ಯಾನ್ ಕುರ್ಚಿ ಸರಿಪಡಿಸಿಕೊಂಡು ಕೂತಳು. ಇದೆಲ್ಲಾ ಅತಿಯಾಯಿತು. ತನ್ನ ಹೊಸ ಸಾಧನದ ಪ್ರಯತ್ನಕ್ಕೆ ಟ್ಯಾನ್‌ಗಳಿಂದ ಸಂತೋಷ ನಿರೀಕ್ಷಿಸಿದ, ಹೆಮಿಗೆ ನಿರಾಸೆಯಾಯಿತು. "ಮಗೂ, ಗ್ರಾಮದ ಜನರಿಗೆ ಇದೆಲ್ಲಾ ಇಷ್ಟ ಆಗೋಲ್ಲ. ಪಟ್ಟಣದ ಸೌಲಭ್ಯವನ್ನು ಇಲ್ಲಿ ನಿರೀಕ್ಷಿಸೋದು ತಪ್ಪು. ನೀರಿನ ಪಾತ್ರೆ ಹೊರಲಾಗದಷ್ಟು ನಾವು ಮೃದುವಾಗಿಲ್ಲ. ನಮ್ಮದೇ ವ್ಯವಸ್ಥೆ...."

"ನಾನು ಒಪ್ಪುವೆ" ಎಂದು ಗಂಭೀರವಾಗಿ ನುಡಿದ ಹೆಮಿ, "ಆದರೆ ಗ್ರಾಮಗಳು ಸದಾ ಹಿಂದುಳಿದಿರಬೇಕಾಗಿಲ್ಲ, ನೀರನ್ನು ಒಳಕ್ಕೆ ಹರಿಸಲು ಕೊಳವೆ ಬಾವಿ ರೂಪಿಸಲು ಸಾಧ್ಯವಾಗದಿದ್ದರೆ, ನೆಲ ಬಾವಿಯಿಂದ ನೀರು ಹೊರುವಂಥ ಹಿಂದುಳಿದ ಸ್ಥಿತಿಯಲ್ಲಿಯೇ ನಾವು ಇರಬೇಕಾಗಿಲ್ಲ...." ಎಂದು ಸ್ಪಷ್ಟವಾಗಿ ಹೇಳಿದಳು.

"ಹೆಮಿ ಹೇಳಿದ್ದು ಸರಿ....ನಮಗೆ ಸಾಧ್ಯವಾದಾಗ ಸುಧಾರಣೆ ಮಾಡದಿದ್ದರೆ ನಾವು ಮೂರ್ಖರಾಗುತ್ತೇವೆ. ಈ ಹೊಸ ವ್ಯವಸ್ಥೆ ತುಂಬಾ ಸುಲಭವಾಗಿದೆ, ವೈಜ್ಞಾನಿಕ ಮತ್ತು ಆರೋಗ್ಯಕರವಾಗಿದೆ. ವಾಪಸು ಹೋದ ಮೇಲೆ ಇದನ್ನು ಎಲ್ಲರಿಗೂ ಹೇಳುವೆ" ಎಂದು ರೋಗಿಯೊಬ್ಬಳು ಹೇಳಿದಾಗ, ಟ್ಯಾನ್ ದಿಗ್ಮೂಢಳಾದಳು. "ಸರಿ, ಸರಿ" ಎಂದಳು. ಇದೇ ವೈಜ್ಞಾನಿಕ, ಇದೇ ಆರೋಗ್ಯ ಎಂಬ ಪದ ಬಳಕೆಯನ್ನು ಅವಳೇ ಹೊಸ ಹೆರಿಗೆ ವಿಧಾನ ಅಳವಡಿಸಿದಾಗ ಹೇಳಿದ್ದಳು! ಅದೃಶ್ಯವಾದ ಬಿರುಗಾಳಿ ಬೀಸಿದಂತೆ ಟ್ಯಾನ್ ನಡುಗಿ ಹೋದಳು, ಹಿಂದೆ ಗ್ರ್ಯಾನಿ ಆಡಿಕೊಳ್ಳುತ್ತಿದ್ದದ್ದು ನೆನಪಿಗೆ ಬಂತು. "ನಾನು ಗ್ರ್ಯಾನಿ ತರಹ ಆಡುತ್ತಿರುವೆನಾ ?" ಟ್ಯಾನ್‌ಗೆ ಏನು ಮಾಡಬೇಕೆಂದೇ ತೋಚಲಿಲ್ಲ. ನೀರು ತರುವ ಕೋಲನ್ನು ಕೈಗೆತ್ತಿಕೊಂಡಳು. ಆಗ ಆನಂದದಿಂದ ಓಲಾಡುತ್ತ ಹೆಮಿ ಬಂದಳು. ಕೊಳವೆ ಸೇರಿಸಿದ್ದ ಖುಷಿ ಅವಳಿಗೆ. ಟ್ಯಾನ್ ನೀರಿನ ಕೋಲನ್ನು ಅಲ್ಲೇ ಹಾಕಿದಳು. ಆಗ ಹೊರಗೆ ಧ್ವನಿ ಕೇಳಿತು. "ದಾಯಿ ಟ್ಯಾನ್....ನನ್ನ ಹೆಂಡತಿಗೆ ಮಗು ಹೊರಗೆ ಬರುವ ಸೂಚನೆ...." ಯುವಕನೊಬ್ಬ ಹೆಂಡತಿ ಜತೆ ನಿಂತಿದ್ದ. ಟ್ಯಾನ್‌ಗೆ ಎಲ್ಲ ಮರೆತು ಹೋಯಿತು. ಅವಳು

ಕುಣಿಯುವಂತೆ ಹೊರ ನಡೆದಳು. ಕೈಯಲ್ಲಿದ್ದ ಕೊಳವೆ ಕೆಳಗೆ ಹಾಕಿ ಹೆಮಿ ನೆರವಿನ ಹಸ್ತ ನೀಡಿದಳು. ಪ್ರಸೂತಿ ಗೃಹ ಮೊದಲಿನಂತಾಯಿತು. ಹೊಸ ರೋಗಿ ಕೈಡಿಯನ್ನು ಕೈಹಿಡಿದು ಒಳಗೆ ಕರೆದೊಯ್ದು ಮಲಗಿಸಲಾಯಿತು. ಕೈಡಿ ಗಂಡ ಹೊರಟಾಗ "ಜೋಪಾನವಾಗಿ ಓಡಿಸು" ಎಂದು ಟ್ಯಾನ್ ಅವನಿಗೆ ಆದೇಶಿಸಿದಳು. ಅವನು ನಗುತ್ತಾ, "ಈಗ ನಾನು ಲಾರಿ ಚಾಲಕ" ಎಂದು ನಡೆದ. ಟ್ಯಾನ್ ಬುದ್ಧಿವಾದಕ್ಕೆ ಕಾರಣವಿತ್ತು. ನಾಲ್ಕು ವರ್ಷಗಳ ಹಿಂದೆ ಕೈಡಿಗೆ ಮೊದಲ ಹೆರಿಗೆಯಾಯಿತು. ಆಗ ಟ್ಯಾನ್ ಮನೆಗೆ ಹೋಗಿಯೇ ಮಾಡಬೇಕಾಗಿತ್ತು. ಅಂದು ಕೈಡಿ ಗಂಡ ಬಂದು ಟ್ಯಾನ್‌ಳನ್ನು ತನ್ನ ಸೈಕಲ್ ಹಿಂದೆ ಕೂರಿಸಿಕೊಂಡು ಹೋದ. ತಂದೆಯಾಗುವ ಸಂತೋಷವೊ, ಏನೊ ಸೈಕಲ್ ಅನ್ನು ಬೀಳಿಸಿಬಿಟ್ಟ, ಜಳಿಗೆ ನಡುಗುತ್ತಿದ್ದ ಟ್ಯಾನ್ ಕೂಡ ಬಿದ್ದಳು. ಅವಳ ಕಾಲಿಗೆ ಗಾಯಗಳಾದವು. ಅದೇ ನೆನಪಿನಲ್ಲಿ ಅವಳು "ಜೋಪಾನವಾಗಿ ಓಡಿಸು" ಎಂದಿದ್ದಳು. "ಈಗ ಲಾರಿ ಓಡಿಸುತ್ತೀಯ....ಇನ್ನೂ ಜೋಪಾನ...."ಎಂದವಳು ಹೇಳಿದಾಗ ಕೈಡಿ ಪರದೆ ಹಿಂದಿನಿಂದಲೇ ನಕ್ಕಳು. ಹೆಮಿಗೆ ಎಲ್ಲಾ ಹೇಳಬೇಕೆಂದಿನಿಸಿತು. ಆದರೆ ಸುಮ್ಮನಾದಳು. ಹೆಮಿ ಬಿಳಿ ಫ್ರಾಕ್ ತೊಟ್ಟು ಹೊಸದಾಗಿ ಸ್ಥಾಪಿಸಿದ್ದ ಕೊಳವೆ ನೀರಿಗೆ ಕೈಯೊಡ್ಡಿದಳು. ಕೈಡಿ ಪಕ್ಕ ಕೂತು ಅವಳ ಬೆನ್ನು ನೀವಿದಳು. ಉಸಿರಾಟದ ವ್ಯಾಯಾಮ ಮಾಡಿಸಿದಳು, ಹೆರಿಗೆ ಸುಲಭವಾಗಲೆಂದು. ಟ್ಯಾನ್ ಇದನ್ನೆಲ್ಲಾ ಹೊಸ ಭಾವನೆಗಳಿಂದಲೇ ಗಮನಿಸಿದಳು. ಈಗ ಅವಳಿಗೆ ಕಿರಿಕಿರಿಯಾಗಲಿಲ್ಲ. ಪ್ರಸೂತಿಯಲ್ಲಿ ಹೊಸ ವಿಧಾನ ಆರಂಭಿಸಿದ ಹೆಮ್ಮೆ ಅವಳಿಗೆ. ಕೈತೊಳೆಯುತ್ತಲೇ ಹೆಮಿಗೆ ಕೈಡಿಯ ಮೊದಲ ಮಗು ಹುಟ್ಟಿದ ಸಂದರ್ಭ ವಿವರಿಸಿದಳು. ಕಾಲಲ್ಲಿ ಗಾಯದ ಗುರುತಿದೆ ಎಂದು ತೋರಿಸಿದಳು. ಹೆಮಿ ಪುಟ್ಟ ಬಾಲಕಿಯಂತೆ ಜೋರಾಗಿ ನಕ್ಕಳು.

ಕತ್ತಲಾಗತೊಡಗಿತು. ಆಕಾಶ ಕಪ್ಪಾಯಿತು. ಭಾರಿ ಗಾಳಿ ಬೀಸುವ ಸೂಚನೆಯನ್ನು ಎಲ್ಲೆಡೆ ನೀಡಲಾಗುತ್ತಿತ್ತು. ಹೆರಿಗೆ ಕೋಣೆಯಲ್ಲಿ ಎಲ್ಲವೂ ನಿಃಶಬ್ದ. ವಿದ್ಯುತ್ ದೀಪ ಹೆರಿಗೆ ಮೇಜಿನ ಮೇಲೆ ರಾರಾಜಿಸುತ್ತಿತ್ತು. ಹಿರಿಯ, ಕಿರಿಯ ಸೂಲಗಿತ್ತಿಯರು ನಿಂತಿದ್ದರು. ತಾಯಿ ಮಗುವನ್ನು ಹೊರತರಲು ಕಾತುರದಿಂದ ಕಾಯುತ್ತಿದ್ದಳು. ರೋಗಿ ಮತ್ತು ಹಿರಿಯಳಿಗೆ ಪರಸ್ಪರ ವಿಶ್ವಾಸವಿತ್ತು. ನಿಜವಾದ ಸೈನಿಕನಂತೆ ದಾಯಿ ಟ್ಯಾನ್ ನಿಂತಿದ್ದಳು. ಹೊರಗೆ ಬಿರುಗಾಳಿಯ ಶಬ್ದ. ಆದರೂ ಒಳಗೆ ನಿಃಶಬ್ದ. ಹೆಮಿ ಬೆನ್ನು ನೀವುದನ್ನು ಮುಂದುವರಿಸಿದಳು. ಕೈಡಿಗೆ ಸುಸ್ತಾಯಿತು. ಅವಳು ಆಕಳಿಸುತ್ತಾ ನಿದ್ರೆಯತ್ತ ಸಾಗುವಂತೆ ಕಂಡಳು. ಹೆರಿಗೆ ನೋವಿನ ಸಮಯದಲ್ಲಿ ಆಕಳಿಸಿದರೆ ಅದು ತೊಂದರೆಯ ಲಕ್ಷಣ ಎಂಬುದು ಹೊಸ, ಹಳೆ ತಲೆಮಾರಿನವರಿಬ್ಬರಿಗೂ ಗೊತ್ತು. ಹೆರಿಗೆ ನಿಧಾನವಾದರೆ ಮಗುವನ್ನು ಫಾರ್ಸೆಪ್ಸ್‌ನಿಂದ ಹೊರತೆಗೆಯಬೇಕು. ಇಲ್ಲವಾದರೆ ಸಮಸ್ಯೆ ಉಂಟಾಗಿ ತಾಯಿ ಜೀವ ಅಪಾಯವಾಗುತ್ತದೆ. ಫಾರ್ಸೆಪ್ಸ್‌ನಿಂದ ಹೆರಿಗೆ ಮಾಡುವುದು ಸರಳ. ಶಸ್ತ್ರ ಚಿಕಿತ್ಸೆ. ಹತ್ತು ನಿಮಿಷ ಕೂಡ ಬೇಡ. ಆದರೆ ಟ್ಯಾನ್ ದಿಢೀರನೆ "ನಾನು ಫೋನ್ ಮಾಡಿ ಬರುವೆ" ಎಂದು ಹೇಳಿ ಹೊರ ನಡೆದಳು. ಅವಳನ್ನು ತಡೆಯಲು ಹೆಮಿ ಓಡಿ ಬಂದಾಗ ಟ್ಯಾನ್ ಅದೃಶ್ಯವಾಗಿದ್ದಳು, ದಟ್ಟವಾದ ಗಾಳಿಯಲ್ಲಿ.

ಬ್ರಿಗೇಡ್ ಕಚೇರಿಗೆ ಓಡಿದ ಟ್ಯಾನ್ ಬಟ್ಟೆ ಗಾಳಿಯಲ್ಲಿ ಹಾರಾಡಿತು. ಕಿವಿ ಮುಚ್ಚಿಕೊಳ್ಳತೊಡಗಿತು. ಇದೇ ಮೊದಲ ಬಾರಿಯಲ್ಲ, ಅವಳು ಫೋನ್‌ಗೆ ಹೋದದ್ದು. ರೋಗಿ ಮಲಗಿದ್ದ ಜಾಗದಲ್ಲಿ ವಿದ್ಯುತ್ ದೀಪ ಬೆಳಗುತ್ತಿತ್ತು. ಎಲ್ಲವೂ ಸರಿಯಾಗಿತ್ತು, ಟ್ಯಾನ್‌ಳನ್ನು ಬಿಟ್ಟು. ಅವಳು ಫೋನಿಗೆ ಹೋಗದೆ ಬೇರೇನೂ ಯೋಚಿಸಲಾರಳಾಗಿದ್ದಳು. ಮೊದಲಿನಿಂದಲೂ ಅದು ಹಾಗೇ. ಈಗ ವಿದ್ಯುತ್, ಟ್ರಾಕ್ಟರ್, ಲಾರಿ ಎಲ್ಲಾ ಇದೆ. ಆದರೂ ಅವಳು ಫೋನಿಗೆ ಓಡಿದಳು. ರೋಗಿಗೆ ಅಗತ್ಯವಾಗಿದ್ದ 10 ನಿಮಿಷಗಳ ಶಸ್ತ್ರಚಿಕಿತ್ಸೆ. ಆಸ್ಪತ್ರೆಗೆ ಫೋನ್ ಮಾಡಬೇಕಾದ ಅಸಹಾಯಕ ಪರಿಸ್ಥಿತಿಗೆ, ಇದೇ ಮೊದಲ ಬಾರಿಗೆ ಟ್ಯಾನ್ ಅಪಮಾನ ಪಟ್ಟುಕೊಳ್ಳುವಂತಾದಳು. ರಸ್ತೆಯಲ್ಲಿ ಲಾರಿ, ಟ್ರಾಕ್ಟರ್ ಓಡಾಡುತ್ತಿವೆ. ದೀಪ ಬೆಳಗುತ್ತಿದೆ....ತರಬೇತಿ ಹೊಂದಿದ ಪ್ರಸೂತಿ ತಜ್ಞೆ.... ಅವಳ ಮುಂದೆ ತರಬೇತಿ ಪಡೆದ ಯುವ ಡಾಕ್ಟರ್ ಹೆಮಿ ಕಂಡುಬಂದಳು. ತನ್ನ ಬಳಿ ಕೂಡ ತಜ್ಞಳಿದ್ದಾಳೆ....ಅವಳು ಈ ರಾತ್ರಿಯಲ್ಲಿ ಫೋನಿಗಾಗಿ ಓಡಿಬರಬಾರದಾಗಿತ್ತು. ಟ್ಯಾನ್ ಪುನಃ ಪ್ರಸೂತಿ ಗೃಹದತ್ತ ಓಡಿದಳು. ಬಲವಾದ ಗಾಳಿ ಅವಳನ್ನು ಓಡಿಸಿ

ಕೊಂಡು ಹೋಯಿತು, ಪ್ರಸೂತಿ ಗೃಹ ಹೊಸ ಹೆಜ್ಜೆ ಇಡಬಾರದೆ ?"

ಅವಳು ಪ್ರಸೂತಿ ಗೃಹಕ್ಕೆ ಬಂದಾಗ ಹೆಮಿ ಗೌನ್ ಹಾಕಿಕೊಂಡು ಸಿದ್ಧವಾಗಿದ್ದಳು. ಅವಳು ಟ್ಯಾನ್ ಊಹೆಯಂತೆ ಶಾಂತಚಿತ್ತಳಾಗಿರಲಿಲ್ಲ. ಸ್ವಲ್ಪ ಅಸ್ವಸ್ಥಳಾಗಿರುವಂತೆ ಕಂಡಳು. ಕೈಡಿ ನರಳುತ್ತಿದ್ದಳು. "ನಾವು ಇನ್ನು ಕಾಯುವಂತಿಲ್ಲ" ಎಂದು ಹೆಮಿ ಕಂಪಿಸುವ ಧ್ವನಿಯಲ್ಲಿ ಹೇಳಿದಾಗ, "ಮಗೂ, ಮುಂದುವರಿಸು" ಎಂದು ಟ್ಯಾನ್ ಸ್ಪಷ್ಟವಾದ ಧ್ವನಿಯಲ್ಲಿ ಹೇಳಿದಳು. "ನಾನು ನಡುಗುತ್ತಿರುವೆ. ಇದನ್ನು ಎರಡೇ ಬಾರಿ ಮಾಡಿರುವುದು. ಆಗೆಲ್ಲಾ ಬೇರೆ ವೈದ್ಯರಿರುತ್ತಿದ್ದರು." "ಗಾಬರಿ ಬೇಡ. ಮೊದಲ ಬಾರಿ ಚಿಂತೆ. ಈಗೇಕೆ" ಎಂದು ಟ್ಯಾನ್ ಸರಸರನೆ ಹೆಮಿಗೆ ನೆರವಾಗಲು ಮುಂದಾದಳು. ಹೆಮಿಯ ಕೈಚಳಕವನ್ನು ಪ್ರಶಂಸಾ ದೃಷ್ಟಿಯಿಂದ ನೋಡಿದಳು. ಅವಳಿಗೆ ಕಾಮ್ರೇಡ್ ಡು ಅವರ ಮಾತು ನೆನಪಾಯಿತು—"ಕ್ರಾಂತಿ ಮಾಡುವುದು ನಮ್ಮ ಕೆಲಸ. ಕ್ರಾಂತಿ ಮಾಡುವುದು ನಮ್ಮ ಅಧ್ಯಯನದ ಗಾಲಿ ಕೂಡ".

"ನಾವು ಹಳೆ ತಲೆಮಾರಿನವರು ಇದಕ್ಕೆ ನೇತೃತ್ವ ವಹಿಸಬೇಕು. ನಾನು ಕಲಿಯುವೆ, ಕಲಿಯುವ ಆಸೆ ಇದೆ. ಅಂದರೆ ಕ್ರಾಂತಿಗಾಗಿ ದುಡಿಯುವ ಆಸೆ...." ಎಂದು ಟ್ಯಾನ್ ಉಲಿದಳು. ತನ್ನ ಕೈ ಕೊಡವಿಕೊಂಡು ಹೆಮಿಯತ್ತ ನಡೆದಳು. "ಹೆಮಿ, ನಾನು ಇದನ್ನೂ ಕಲಿಯುವೆ" ಎಂಬ ಅವಳ ಧ್ವನಿಯಲ್ಲಿ ಅಡಗಿದ್ದ ಖಚಿತ ಸ್ಪಷ್ಟತೆಯನ್ನು ಹೆಮಿ ಗುರುತಿಸಿದಳು. ಆ ಕ್ಷಣದಲ್ಲಿ ಹೆಮಿಗೆ ಈ ಪ್ರಸೂತಿ ಗೃಹದ ಇತಿಹಾಸ ಅರಿವಾಯಿತು. ಉತ್ಸಾಹದ ಬುಗ್ಗೆಯಂತೆ ಕಂಡ ಈ ವೃದ್ಧಳನ್ನು ಅಪ್ಪಿಕೊಳ್ಳಬೇಕೆಂದೆನಿಸಿತು, ಹೆಮಿಗೆ. "ನೀನು ಹೇಳೋದು ಸರಿ, ಇದು ಕಷ್ಟವಲ್ಲ, ಈಗ ಇಬ್ಬರೂ ಕೂಡಿ ಮಾಡೋಣ. ಮುಂದಿನ ಬಾರಿ ನೀನು ಒಬ್ಬಳೇ ಮಾಡಬಹುದು."

ಟ್ಯಾನ್ ಒಂದೇ ಸಮನೆ ಹೆಮಿಯ ಕೈಚಳಕವನ್ನು ಗಮನಿಸತೊಡಗಿದಳು. ಕೆಲಕ್ಷಣದಲ್ಲಿ ಮಗುವಿನ ಅಳು ಕೇಳಿಸಿತು. ಟ್ಯಾನ್‌ಳ ಆನಂದಕ್ಕೆ ಎಲ್ಲೆ ಇಲ್ಲ. ಅವಳನ್ನು ಅಲ್ಲಿದ್ದವರೆಲ್ಲಾ ಅಭಿನಂದಿಸುವವರೇ, ಅವಳು ಮುಗುಳ್ನಗುತ್ತಾ ಕುಳಿತಳು. ಅವಳ ದೃಷ್ಟಿ ದೀಪದ ಮೇಲಿತ್ತು. ಅದು ಬೆಳಕನ್ನು ಮಾತ್ರ ಬೀರುತ್ತಿರಲಿಲ್ಲ, ಅದೊಂದು ಶಕ್ತಿ ಕೇಂದ್ರವಾಗಿತ್ತು. "ನಾವು ಸಮಾಜವನ್ನೂ ಬದಲಿಸುತ್ತೇವೆ" ಎಂಬ ಅಧ್ಯಕ್ಷ ಡು ಅವರ ಧ್ವನಿ ಅವಳಿಗೆ ಕೇಳಿಸತೊಡಗಿತು.

"ಡು, ನೀವು ಯೋಚಿಸಬೇಡಿ. ನಮ್ಮ ಕೆಲಸ ಕ್ರಾಂತಿ ಮಾಡುವುದೆಂದು ನನಗೆ ಗೊತ್ತು. ನಾವು ಕಲಿಯೋಣ, ಮುಂದೆ ಸಾಗೋಣ" ಎಂದು ಟ್ಯಾನ್ ಮನಸ್ಸಿನಲ್ಲಿಯೇ ಹೇಳಿದಳು.

ಸ್ಪಷ್ಟವಾದ ಧ್ವನಿಯು ವಿಜಯದ ನಗೆ ಬೀರಿತೇನೋ ಎಂಬಂತೆ ಬಿರುಗಾಳಿಯು ಮಂದವಾಗತೊಡಗಿತು. ರಾತ್ರಿ ನಿಶ್ಶಬ್ಧವಾಯಿತು. ಅದು ಮಧ್ಯರಾತ್ರಿಯ ಸಮಯ. ಪ್ರಸೂತಿ ಗೃಹವೇಕೆ, ಇಡೀ ಗ್ರಾಮವು ಹೊಸ ದಿಗಂತದತ್ತ ದಾಪುಗಾಲು ಹಾಕತೊಡಗಿತು.

★

## ಸ್ವಾಗತಾರ್ಹ

ಕರ್ನಾಟಕ ಹಿಂದೂ ಉತ್ತರಾಧಿಕಾರ ಮಸೂದೆ 1991ರ ತಿದ್ದುಪಡಿಗೆ ರಾಷ್ಟ್ರಪತಿಗಳ ಅಂಗೀಕಾರ ಮುದ್ರೆ ತಡವಾಗಿಯಾದರೂ ಬಿದ್ದಿರುವುದು ಸ್ವಾಗತಾರ್ಹ.

# ಎಲ್ಲರಿಗೂ ಆರೋಗ್ಯ

★ ಉದಯ

ಯಾವುದೇ ಪ್ರಗತಿಶೀಲ ಸಮಾಜಕ್ಕೆ ಆರ್ಥಿಕ, ಸಾಮಾಜಿಕ ಭದ್ರತೆಯಷ್ಟೇ ಅಗತ್ಯವಾದುದು ಆರೋಗ್ಯ ರಕ್ಷಣೆ. ಜನಸಾಮಾನ್ಯರಿಗೆ ಆರೋಗ್ಯ ಸೇವಾ ಸೌಲಭ್ಯ ಸಮರ್ಪಕವಾಗಿ ದೊರೆಯುವಂತೆ ಮಾಡುವಷ್ಟೇ ಇದು ದುಬಾರಿ ಆಗದಂತೆ ನೋಡಿಕೊಳ್ಳುವುದು ಅತಿ ಮಹತ್ತರ ಜವಾಬ್ದಾರಿ.

ಆದರೆ, ಭಾರತದಲ್ಲಿ ಜನತೆಯ ಆರೋಗ್ಯ ರಕ್ಷಣಾ ವ್ಯವಸ್ಥೆ ತೀವ್ರ ಕಳವಳಕಾರಿಯಾಗಿದೆ. ಆರೋಗ್ಯ ರಕ್ಷಣೆಗಾಗಿ ಚೀನಾಕ್ಕಿಂತ ಹೆಚ್ಚು ಹಣ ವ್ಯಯ ಮಾಡುತ್ತಿದೆಯಾದರೂ ಅದರಿಂದ ಸಾಮಾನ್ಯರಿಗೆ ಸಿಗುತ್ತಿರುವ ಲಾಭ ತೀರಾ ಕಡಿಮೆ ಎಂದು ವಿಶ್ವ ಬ್ಯಾಂಕ್ ತನ್ನ ವಿಶ್ವ ಅಭಿವೃದ್ಧಿ ಕುರಿತ ವರದಿಯೊಂದರಲ್ಲಿ ಆತಂಕ ವ್ಯಕ್ತಪಡಿಸಿರುವುದು ಈ ನಿಟ್ಟಿನಲ್ಲಿ ಗಮನಾರ್ಹ.

1978ರಲ್ಲಿ ನಡೆದ ವಿಶ್ವ ಆರೋಗ್ಯ ಸಮ್ಮೇಳನದಲ್ಲಿ ಹೊರಡಿಸಿದ '2000 ಇಸವಿಗೆ ಎಲ್ಲರಿಗೂ ಆರೋಗ್ಯ' ಎಂಬ ಘೋಷಣೆಗೆ (Alma Ata Declaration) ಭಾರತವೂ ಸಹಿ ಹಾಕಿದೆ. ಇದಾದ ಹದಿನೈದು ವರ್ಷಗಳ ಸುದೀರ್ಘ ಅವಧಿಯ ಬಳಿಕ ಆರೋಗ್ಯ ಕ್ಷೇತ್ರದಲ್ಲಿ ಭಾರತ ಅತಿ ಹಿಂದುಳಿದ ದೇಶವಾಗಿಯೇ ಇನ್ನೂ ಸ್ಥಿರವಾಗಿ ಉಳಿದಿದೆ.

ಕೆಲ ಆಸ್ಪತ್ರೆಗಳನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಹೇಳುವುದಾದರೆ ನಾವು ಈಗ ಇಡೀ ವಿಶ್ವದಲ್ಲೇ ಅತ್ಯುತ್ತಮ ವೈದ್ಯಕೀಯ ಸೌಲಭ್ಯಗಳನ್ನು ಹೊಂದಿರುವ ಹೆಗ್ಗಳಿಗೆ ಪಾತ್ರರಾಗುತ್ತೇವೆ. ಇದೇ ಮಾತು ವೈಯುಕ್ತಿಕ ಪರಿಣತಿಗೂ ಅನ್ವಯಿಸುತ್ತದೆ. ಆದರೆ, ಇದು ದೇಶದ ಒಟ್ಟಾರೆ ಸ್ಥಿತಿಯನ್ನು ಬಿಂಬಿಸುವುದಿಲ್ಲ. ಯಾವುದೇ ದೇಶದ ಆರೋಗ್ಯ ವ್ಯವಸ್ಥೆಯನ್ನು ನಿರ್ಧರಿಸುವ ಮಾನದಂಡ ಅಲ್ಲಿನ ಬಹುಜನರ ಸ್ಥಿತಿ–ಗತಿಗಳನ್ನು ಆಧರಿಸಬೇಕೇ ಹೊರತು ಕೆಲವೇ ಸ್ಥಿತಿವಂತರನ್ನು ಅಲ್ಲ. ಆದ್ದರಿಂದ, ಇದು ವಸ್ತುಸ್ಥಿತಿಯ ಮಾನದಂಡ ಆಗಲಾರದು.

1982ರ ರಾಷ್ಟ್ರೀಯ ಆರೋಗ್ಯ ನೀತಿಯಲ್ಲಿ ಸರ್ಕಾರವೇ ಹೊರಡಿಸಿದ ಹೇಳಿಕೆಯಂತೆ ವೈದ್ಯಕೀಯ ಸೌಲಭ್ಯಗಳ ಸೃಷ್ಟಿಗೆ ಸಂಬಂಧಿಸಿದ ರೋಗ ಮತ್ತು ಚಿಕಿತ್ಸೆ ಆಧಾರಿತ ದೃಷ್ಟಿಕೋನ ವಿಶೇಷವಾಗಿ ನಗರವಾಸಿ ಮೇಲ್‌ಸ್ತರಕ್ಕೆ ಎಷ್ಟೋ ಲಾಭ ಮಾಡಿತು. ಸಮಸ್ತ ಜನತೆಗೂ ತಲುಬೇಕೆಂಬ ಸಮಗ್ರ ಪ್ರಾಥಮಿಕ ಆರೋಗ್ಯ ರಕ್ಷಣೆಯ ಹಿನ್ನೆಲೆಯಿಂದ ಮೊಳಕೆಯೊಡೆದ ಈ ಉದ್ದೇಶ ಹೀಗೆ ಕೆಲವೇ ಜನರ ಒಳಿತಿಗೆ ಸೀಮಿತವಾಯಿತು.

ಅಂದರೆ ಸ್ವಾತಂತ್ರ್ಯದ ನಂತರ ಏನೂ ಪ್ರಗತಿ ಆಗಿಲ್ಲ ಎಂದು ಅರ್ಥವಲ್ಲ. ಮೂಲಭೂತ ಸೌಲಭ್ಯಗಳ ಅಭಿವೃದ್ಧಿ ಮತ್ತು ನಮ್ಮ ಜನರ ಆರೋಗ್ಯದ ಸ್ಥಿತಿ–ಗತಿಗಳ ಮೇಲಿನ ಅದರ ಪರಿಣಾಮ ಎರಡೂ ಸೇರಿದಂತೆ ನಾನಾ ವಲಯಗಳಲ್ಲಿ ಪ್ರಗತಿ ಸಾಧಿಸಿದ್ದೇವೆ.

ಇಷ್ಟಾದರೂ ಆಧುನಿಕ ವೈದ್ಯಕೀಯ ಸೌಲಭ್ಯಗಳನ್ನು ಪಡೆಯುವ ಅವಕಾಶ ನಮ್ಮಲ್ಲಿ ಈಗಲೂ ಶೇಕಡಾ 20ರಷ್ಟು ಜನರಿಗೆ ಮಾತ್ರ ಸಾಧ್ಯವಾಗಿದೆ. ಮೇಲಾಗಿ ರೋಗ–ರುಜಿನಗಳನ್ನು ವಾಸಿಮಾಡಿಕೊಳ್ಳಲು ಶೇ. 84ರಷ್ಟು ಹಣ ಖಾಸಗಿಯಾಗಿ ಜೇಬಿನಿಂದ ವ್ಯಯ ಮಾಡುವ ಸ್ಥಿತಿ ಮುಂದುವರಿದೆ.

ಈಗಲೂ ಶೇ. 40ರಷ್ಟು ಮಕ್ಕಳು ಪೌಷ್ಠಿಕಾಂಶದ ಕೊರತೆಯಿಂದ ನರಳುತ್ತಿದ್ದಾರೆ. 1961ರಲ್ಲಿ 82 ಮಿಲಿಯನ್ ಟನ್‌ನಷ್ಟು ಇದ್ದ ಆಹಾರ ಧಾನ್ಯದ ಉತ್ಪಾದನೆ 1983ಕ್ಕೆ 124 ಮಿಲಿಯನ್ ಟನ್‌ಗಳಿಗೆ ಏರಿದರೂ ತಲಾ ಬಳಕೆ ಪ್ರಮಾಣದಲ್ಲಿ ಮಾತ್ರ ತೀವ್ರ ಕುಸಿತ ನೋಡುತ್ತೇವೆ.

ಪ್ರತಿವರ್ಷ ಹುಟ್ಟುವ 23 ಮಿಲಿಯನ್ ಮಕ್ಕಳಲ್ಲಿ 2.5 ಮಿಲಿಯನ್ ಮಕ್ಕಳು ಒಂದು ವರ್ಷದ ಒಳಗೆ ಸಾವನ್ನಪ್ಪುತ್ತಿದ್ದಾರೆ. ಉಳಿದ ಮಕ್ಕಳಲ್ಲಿ ಒಂಬತ್ತರಲ್ಲಿ ಒಂದು ಮಗು ಮತ್ತು ಐದು ವರ್ಷಗಳೊಳಗೆ ಮರಣ ಹೊಂದುತ್ತಿವೆ. ಹತ್ತರಲ್ಲಿ ಕನಿಷ್ಟ ನಾಲ್ಕು ಮಕ್ಕಳು ಅಪೌಷ್ಠಿಕತೆಯಿಂದ ನರಳುತ್ತಿವೆ.

ದೇಶದಲ್ಲಿನ ಮುಕ್ಕಾಲು ಭಾಗದ ರೋಗಗಳು ಅಪೌಷ್ಠಿಕತೆ, ಅಶುದ್ಧ ನೀರು ಮತ್ತು ರೋಗ

ನಿರೋಧಕ ಲಸಿಕೆ ಹಾಕಿಸದೇ ಇರುವುದರಿಂದ ಬರುತ್ತಿವೆ. ಸರಾಸರಿ ಜೀವನಾಯುಷ್ಯ 57 ವರ್ಷಗಳು. ಇದು ತೃತೀಯ ಜಗತ್ತಿನ ರಾಷ್ಟ್ರಗಳಾದ ಬ್ರೆಜಿಲ್, ವಿಯಟ್ನಾಂ, ಬರ್ಮಾ, ಪೆರು ದೇಶಗಳ ಆಯುಷ್ಯ ಪ್ರಮಾಣಕ್ಕಿಂತ ಕಡಿಮೆ ಎಂದರೆ ನಮ್ಮ ಶೋಚನೀಯ ಸ್ಥಿತಿ ಅರಿವಾದೀತು.

ಕಾಲು ಭಾಗದಷ್ಟು ಮಕ್ಕಳು ಮಾತ್ರ ಇಮ್ಯೂನೈಜೇಷನ್ ವ್ಯಾಪ್ತಿಗೆ ಒಳಪಟ್ಟಿವೆ. ವಿವಿಧ ಖಾಯಿಲೆ-ಕಸಾಯಿಗಳಿಂದ ಅಕಾಲ ಮರಣಕ್ಕೆ ಈಡಾಗುತ್ತಿರುವ 1.3 ಮಿಲಿಯನ್ ಮಕ್ಕಳ ಸಾವನ್ನು ಇದರಿಂದ ತಪ್ಪಿಸಬಹುದಿತ್ತು. ಮೂರನೇ ಒಂದು ಭಾಗದಷ್ಟು ಭಾರತದ ಒಟ್ಟಾರೆ ಜನ ಸಮುದಾಯ ಪ್ರತಿ ವರ್ಷ ಮಲೇರಿಯಾ, ಕಾಲರಾದಂಥ ಮಾರಕ ರೋಗಗಳಿಗೆ ತುತ್ತಾಗುತ್ತಿದೆ.

ವಿಜ್ಞಾನ ಇಷ್ಟೊಂದು ಬೆಳೆದು ನಿಂತಿರುವ ಈ ಸಂದರ್ಭದಲ್ಲೂ ಪ್ರತಿ ವರ್ಷ 5,50,000 ಜನ ಕ್ಷಯ ರೋಗದಿಂದ ಮರಣ ಹೊಂದುತ್ತಿದ್ದಾರೆ. ಅಲ್ಲದೇ 90,000 ಜನ ಈ ರೋಗಕ್ಕೆ ತುತ್ತಾಗುತ್ತಿದ್ದಾರೆ. ಇದೇ ರೀತಿ ವಾರ್ಷಿಕ 1.5 ಮಿಲಿಯನ್ ಮಕ್ಕಳು ಅತಿಬೇಧಿಯಿಂದ ಸಾಯುತ್ತಿವೆ ಎಂದರೆ ಈ ಕಡೆ ಹರಿಸಬೇಕಾದ ಗಮನದ ತೀವ್ರತೆ ತಿಳಿದೀತು.

ದೇಶದ ಪರಿಸ್ಥಿತಿ ಹೀಗಿರುವಾಗ ನಮ್ಮಲ್ಲಿನ ಎರಡು ಲಕ್ಷಕ್ಕೂ ಹೆಚ್ಚು ಅಲೋಪತಿ ವೈದ್ಯರಲ್ಲಿ ಶೇಕಡಾ 72ರಷ್ಟು ಮಂದಿ ನಗರ–ಪಟ್ಟಣ ಪ್ರದೇಶಗಳಲ್ಲಿ ನೆಲೆಸಿದ್ದಾರೆ. ಮೇಲಾಗಿ ಸರ್ಕಾರದ ಒಟ್ಟು ಆರೋಗ್ಯ ಸಿಬ್ಬಂದಿಯಲ್ಲಿ ಶೇಕಡಾ 15ರಷ್ಟು ಮಂದಿ ಮಾತ್ರ ಗ್ರಾಮೀಣ ಪ್ರದೇಶದಲ್ಲಿ ಕೆಲಸ ಮಾಡುತ್ತಿದ್ದಾರೆ. ಈ ಎಲ್ಲ ಕೊರತೆಗಳ ಫಲವಾಗಿ ಜನ ನಿರ್ವಾಹವಿಲ್ಲದೆ ಖಾಸಗಿಯಾಗಿ ವೈದ್ಯಕೀಯ ಸೌಲಭ್ಯಗಳನ್ನು ಪಡೆಯಬೇಕಾದ ದುಃಸ್ಥಿತಿ ಬಂದೊದಗಿದೆ.

1977ರಲ್ಲಿ ಮೂರು ಹಂತದ ಗ್ರಾಮೀಣ ಪ್ರಾಥಮಿಕ ಆರೋಗ್ಯ ಯೋಜನೆಯನ್ನು ಜಾರಿಗೊಳಿಸಲಾಯಿತು. ಗ್ರಾಮ ಮಟ್ಟದಲ್ಲಿ ಸಮುದಾಯ ಆರೋಗ್ಯ ಕಾರ್ಯಕರ್ತರನ್ನು ನೇಮಿಸಬೇಕು, ಐದು ಸಾವಿರ ಜನಸಂಖ್ಯೆಯ ವ್ಯಾಪ್ತಿಯಲ್ಲಿ ಉಪ ಆರೋಗ್ಯ ಕೇಂದ್ರ ತೆರೆಯಬೇಕು ಮತ್ತು ಅಲ್ಲಲ್ಲಿ ಮೂವರು ವೈದ್ಯರು ಮತ್ತಿತರ ಪೂರಕ ಸಿಬ್ಬಂದಿಯನ್ನು ಉಳ್ಳ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸಿ ಸುತ್ತಮುತ್ತಲಿನ ಜನತೆಗೆ ಸನಿಹದಲ್ಲೇ ವೈದ್ಯಕೀಯ ಸೌಲಭ್ಯಗಳು ಸಿಗುವಂತೆ ಮಾಡಬೇಕು ಎಂಬುದು ಇದರ ಉದ್ದೇಶ.

ಆದರೆ, ಸಂಪನ್ಮೂಲ, ಸಿಬ್ಬಂದಿ ಮತ್ತು ವೈದ್ಯಕೀಯ ಸೌಲಭ್ಯಗಳ ಕೊರತೆ ಹಾಗೂ ಹಂಚಿಕೆಯಲ್ಲಿನ ಅಸಮತೋಲ ಇದರ ಅನುಷ್ಠಾನದಲ್ಲಿ ಭಾರೀ ಅಡ್ಡಗಾಲಾಗಿ ನಿಂತವು, ದೇಶದ ಅರ್ಧ ಭಾಗಕ್ಕೂ ಇವು ತಲುಪಲಿಲ್ಲ ಎಂದು ಸರ್ಕಾರವೇ ಕೊರಗು ತೋಡಿಕೊಂಡಿದೆ. ಇನ್ನೊಂದು ಸಮಸ್ಯೆ ಎಂದರೆ ಗ್ರಾಮಾಂತರ ಪ್ರದೇಶದಲ್ಲಿ ಕೆಲಸ ಮಾಡಲು ವೈದ್ಯರನ್ನು ಆಕರ್ಷಿಸುವುದು, ವೈದ್ಯರು ಹಳ್ಳಿಗಳಿಗೆ ಹೋಗಿ ಕೆಲಸ ಮಾಡುತ್ತಿರುವುದು ಸೇವಾ ದೃಷ್ಟಿಯಿಂದಲ್ಲ. ವಿಧಿಯಿಲ್ಲದೆ ಅಂತಿಮ ಆಯ್ಕೆಯ ಫಲವಾಗಿ ಅಷ್ಟೇ ಎಂಬುದು ಭಾರತದ ಮಟ್ಟಿಗಂತೂ ಕಟುಸತ್ಯ. ಇದು ನಮ್ಮ ಶಿಕ್ಷಣ ವ್ಯವಸ್ಥೆಯ ನ್ಯೂನತೆಯೇ ಸರಿ. ಅತ್ಯಾಧುನಿಕ ಸಲಕರಣೆಗಳೊಂದಿಗೆ ನಗರ ಪ್ರದೇಶಗಳಲ್ಲಿ ತರಬೇತಿ ಪಡೆಯುವ ಅವರು ಗ್ರಾಮಾಂತರ ಪ್ರದೇಶಕ್ಕೆ ಹೊಂದಿಕೊಳ್ಳಲು ಪರದಾಡುತ್ತಿದ್ದಾರೆ. ಅದರಲ್ಲೂ ಮನಸ್ಸು ಇಲ್ಲದಿರುವುದು ಹಳ್ಳಿಗಳಿಗೆ ಹೋಗಲು ಆಗದಿರುವುದಕ್ಕೆ ಪ್ರಮುಖ ಕಾರಣ.

ವೈದ್ಯಕೀಯ ಕೋರ್ಸಿಗೆ ಪ್ರವೇಶ ಪಡೆಯುತ್ತಿರುವ ಬಹುತೇಕ ವಿದ್ಯಾರ್ಥಿಗಳು ಹಳ್ಳಿಗಳ ಗಂಧ–ಗಾಳಿ ಅರಿಯದ ನಗರ ಆಧಾರಿತ ಸ್ಥಿತಿವಂತ ಕುಟುಂಬಗಳಿಂದ ಬಂದವರು. ಅವರು ಹಳ್ಳಿಗಳನ್ನರಸಿ ಹೋಗುವವರು ಎಂದು ನಿರೀಕ್ಷಿಸುವುದೇ ತಪ್ಪಾದೀತು ಎಂಬ ಸ್ಥಿತಿ ಒದಗಿದೆ, ಆದ್ದರಿಂದ ಹಳ್ಳಿ ವಿದ್ಯಾರ್ಥಿಗಳೂ ಇದರಲ್ಲಿ ಸಮಪಾಲು ಸಿಗುವಂಥ ಸಮತೋಲನ ವಾತಾವರಣ ಸೃಷ್ಟಿಸಬೇಕಾಗಿದೆ. ಒಟ್ಟಿನಲ್ಲಿ ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಶಿಕ್ಷಣ ಪದ್ಧತಿಯಲ್ಲೂ ಆಮೂಲಾಗ್ರ ಬದಲಾವಣೆ ತರುವುದು ಅನಿವಾರ್ಯ.

ಇನ್ನು 'ಜನತೆಯ ಆರೋಗ್ಯ ಜನತೆಯ ಕೈಯಲ್ಲೇ ಇದೆ' ಎಂಬ ಘೋಷಣೆಗೆ ಸಾರ್ವತ್ರಿಕ ಬೆಂಬಲ ದೊರೆತಿದೆ. ಜನಸಮುದಾಯ ಸಕ್ರಿಯವಾಗಿ ಭಾಗವಹಿಸದೆ ಆರೋಗ್ಯ ಸ್ಥಿತಿ ಸುಧಾರಣೆ ಆಗದು ಎಂದು ಸರ್ಕಾರಕ್ಕೂ ಮನವರಿಕೆಯಾಗಿದೆ. ಆದರೆ, ವಿಭಿನ್ನ ಜಾತಿ, ಮತ, ಧರ್ಮಗಳ ಇಲ್ಲಿ ಅದರಲ್ಲೂ ಗ್ರಾಮಾಂತರ ಪ್ರದೇಶಗಳಲ್ಲಿ ಎಲ್ಲರನ್ನೂ ಒಟ್ಟಿಗೆ ಕರೆದೊಯ್ಯುವಲ್ಲಿ ವಿಫಲವಾಗಿದ್ದೇವೆ. ಈ ಬಗ್ಗೆ

ಸ್ಪಷ್ಟತೆ ಮತ್ತು ಮಾಡೇ ತೀರುತ್ತೇವೆ ಎಂಬ ಮೊಂಡು ಧೈರ್ಯ ಸರ್ಕಾರಕ್ಕೆ ಇಲ್ಲ.

ಯಾವ ಕ್ಷೇತ್ರಕ್ಕೆ ಎಷ್ಟು ಆದ್ಯತೆ ನೀಡಬೇಕು, ಯಾವುದರತ್ತ ತುರ್ತು ಗಮನಹರಿಸಬೇಕು ಎಂಬ ದೂರದೃಷ್ಟಿಯ ಕೊರತೆ ಹಾಗೂ ಸರ್ವತೋಮುಖ ಹಿನ್ನೆಲೆಯ ಸಮಗ್ರ ದೃಷ್ಟಿಕೋನ ಇಲ್ಲದಿರುವುದು ನಮ್ಮ ಈ ಸ್ಥಿತಿಗೆ ತಂದು ನಿಲ್ಲಿಸಿದೆ. ಸಂಪನ್ಮೂಲಗಳ ವಿನಿಯೋಗವು ಇದನ್ನು ಪುಷ್ಟೀಕರಿಸುತ್ತದೆ.

ಮೊದಲನೆ ಪಂಚವಾರ್ಷಿಕ ಯೋಜನೆಯಲ್ಲಿ ಶೇಕಡಾ 3.32ರಷ್ಟು ಬಜೆಟ್ ಪಾಲು ಪಡೆದಿದ್ದ ಆರೋಗ್ಯ ಕ್ಷೇತ್ರದ ಪ್ರಮಾಣ ಕ್ರಮೇಣ ಇಳಿಮುಖ ಆಗುತ್ತಾ ಹೋಗಿ ಕಳೆದ ಯೋಜನೆಯಲ್ಲಿ ಶೇ. 1.88ಕ್ಕೆ ಬಂದು ನಿಂತಿದೆ. ಸರ್ಕಾರ ಮಾಡುತ್ತಿರುವ ತಲಾ ವೆಚ್ಚ ಮಾಸಿಕ ಮೂರು ರೂಪಾಯಿ ಮಾತ್ರ. ಈ ಅಲ್ಪ ಪ್ರಮಾಣದಲ್ಲೂ ಶೇಕಡಾ 80ರಷ್ಟು ಪಾಲು ಬೃಹತ್ ಆಸ್ಪತ್ರೆಗಳು ಮತ್ತು ಸಂಶೋಧನಾಲಯಗಳ ಪಾಲಾಗುತ್ತಿದೆ.

ಅವಾದರೂ ಮಹಾನಗರಗಲ್ಲೇ ಕೇಂದ್ರೀಕೃತ. ಇವು ಶೇ. 20ರಷ್ಟು ಜನತೆಗೂ ವೈದ್ಯಕೀಯ ಸೇವೆಯನ್ನು ಒದಗಿಸುತ್ತಿಲ್ಲ ಎಂಬುದು ಈ ನಿಟ್ಟಿನಲ್ಲಿ ಉಲ್ಲೇಖಾರ್ಹ. ಇದಕ್ಕೆ ತದ್ವಿರುದ್ಧ ಎನ್ನುವಂತೆ ಉಳಿದ 80ರಷ್ಟು ಜನಕ್ಕೆ ಮೂಲಭೂತ ವೈದಕೀಯ ಸೌಲಭ್ಯ ಒದಗಿಸುತ್ತಿರುವ ಪ್ರಾಥಮಿಕ ಆರೋಗ್ಯ ಸೇವೆಗೆ ಶೇಕಡಾ 20ರಷ್ಟು ಹಣ-ಸಂಪನ್ಮೂಲಗಳು ಲಭ್ಯವಾಗುತ್ತಿವೆ.

ಸರ್ಕಾರದ ಇಂಥ ಧೋರಣೆಯಿಂದಾಗಿ ವೈದ್ಯಕೀಯ ಸೇವೆಯೂ ಮಾರುಕಟ್ಟೆಯಲ್ಲಿ ಖರೀದಿಸಬಹುದಾದ ಒಂದು ವಸ್ತುವಾಗಿದೆ. ಕೊಳ್ಳಲು ಸಾಮರ್ಥ್ಯ ಉಳ್ಳವರು ಮಾತ್ರ ಈ ಸೌಲಭ್ಯವನ್ನು ಪಡೆಯಬಹುದಾಗಿದೆ. ದೋಷಪೂರಿತ ಆದ್ಯತೆಯೇ ಈ ಸಂಕಷ್ಟ ಸ್ಥಿತಿಗೆ ಮೂಲ ಕಾರಣ. ಈ ಹಿನ್ನೆಲೆಯಲ್ಲಿ ಪುನರ್ ಪರಿಶೀಲನೆಯ ಅಗತ್ಯ ತುರ್ತಾಗಿದೆ. ಇಲ್ಲದಿದ್ದಲ್ಲಿ 2000 ಇಸವಿ ಇರಲಿ ಇನ್ನೊಂದು ಶತಮಾನ ಕಳೆದರೂ ಸಾಮಾನ್ಯರಿಗೆ ನಿರಾಯಾಸವಾಗಿ ವೈದ್ಯಕೀಯ ಸೇವೆ ಪಡೆಯುವ 'ಭಾಗ್ಯ' ದೊರೆಯದು ಎಂಬುದನ್ನು ಯಾರಾದರೂ ನಿರ್ಭಯದಿಂದ ಹೇಳಬಹುದು.

ಈ ನಡುವೆ ವೈದ್ಯಕೀಯ ಕ್ಷೇತ್ರಕ್ಕೂ ದೊಡ್ಡ ಉದ್ಯಮಪತಿಗಳು ದಾಳಿಯಿಟ್ಟಿದ್ದಾರೆ. ಇದಕ್ಕೆ ಸರ್ಕಾರದ ಪ್ರೋತ್ಸಾಹವೂ ಕಾರಣ. ವೈದ್ಯಕೀಯ ಕ್ಷೇತ್ರದಲ್ಲಿ ಸ್ವಯಂ ಸೇವಾ ಸಂಘಟನೆಗಳು ಮತ್ತು ಖಾಸಗಿಯವರು ಸಕ್ರಿಯವಾಗಿ ಪಾಲ್ಗೊಳ್ಳಬೇಕು ಎಂದು ಸರ್ಕಾರ ಬಹಿರಂಗವಾಗಿಯೇ ಪ್ರಕಟಿಸಿ, ಸಂವಿಧಾನಬದ್ಧ ಹೊಣೆಗಾರಿಕೆಯಿಂದ ನುಣುಚಿಕೊಳ್ಳುವ ಪ್ರಯತ್ನ ಮಾಡಿದೆ.

ವಿಶ್ವಬ್ಯಾಂಕ್, ಅಂತರರಾಷ್ಟ್ರೀಯ ಹಣಕಾಸು ನಿಧಿಯಂಥ ಜಾಗತಿಕ ಸಂಸ್ಥೆಗಳ ಸಲಹೆಯಂತೆ ಜನ ಕಲ್ಯಾಣ ಕಾರ್ಯಕ್ರಮಗಳ ಮೇಲಿನ ವೆಚ್ಚದಲ್ಲಿ ಸರ್ಕಾರ ಭಾರೀ ಕಡಿತ ಮಾಡಿದೆ. ಇದಕ್ಕೆ ಅನುಗುಣವಾಗಿ ಮೊದಲು ಉಚಿತ ಚಿಕಿತ್ಸೆ ನೀಡುತ್ತಿದ್ದ ಸರ್ಕಾರಿ ಆಸ್ಪತ್ರೆಗಳೂ ಈಗ ಶುಲ್ಕ ವಸೂಲಿ ಮಾಡುವಂತಾಗಿದೆ. ಹಿಂದು-ಮುಂದು ಯೋಚಿಸದೆ, 'ದೂರದ ದೊರೆ'ಗಳ ತಾಳಕ್ಕೆ ತಕ್ಕಂತೆ ಕುಣಿಯುತ್ತಾ ಜಗತ್ತಿನ ಅತಿ ದೊಡ್ಡ ಪ್ರಜಾಪ್ರಭುತ್ವ ಸರ್ಕಾರ ಈ ರೀತಿ ಅಗಾಧ ಬದಲಾವಣೆಗಳಿಗೆ ತೆರೆದುಕೊಳ್ಳುತ್ತಿದೆ.

ಇನ್ನೊಂದು ಪ್ರಮುಖ ಕೊರತೆ ಎಂದರೆ ಈಗಲೂ ನಾವು ವೈದ್ಯಕೀಯ ಸೇವೆ ಎಂದರೆ ರೋಗ ವಾಸಿ ಮಾಡುವುದಷ್ಟೇ ಎಂಬ ಭಾವನೆ ಹೊಂದಿದ್ದೇವೆ. ವಿಶ್ವ ಆರೋಗ್ಯ ಸಂಸ್ಥೆಯಲ್ಲಿ ಮೂಡಿ ಬಂದಿರುವ ವ್ಯಾಖ್ಯಾನದಂತೆ 'ಆರೋಗ್ಯ ಎನ್ನುವುದು ಕೇವಲ ರೋಗರಹಿತ ಸ್ಥಿತಿ ಅಲ್ಲ. ವ್ಯಕ್ತಿಯ ಸಂಪೂರ್ಣ ದೈಹಿಕ ಮತ್ತು ಮಾನಸಿಕ ಕ್ಷೇಮ' ಎಂಬ ಸತ್ಯ ನಮಗಿನ್ನೂ ಮನವರಿಕೆ ಆಗದಿರುವುದು ಸೋಜಿಗದ ವಿಷಯ.

ಆದ್ದರಿಂದ ಆರೋಗ್ಯ ಎಂದರೆ ಕೇವಲ ರೋಗ, ವೈದ್ಯರು, ಔಷಧ ಮಾತ್ರವಲ್ಲ, ಇದರೊಂದಿಗೆ ಹಲವಾರು ಅಂಶಗಳ ತಳುಕು ಹಾಕಿಕೊಂಡಿದೆ. ಶುದ್ಧ ಕುಡಿಯುವ ನೀರು, ಪೌಷ್ಟಿಕ ಆಹಾರ, ರೋಗ ನಿರೋಧಕ ಲಸಿಕೆ, ನೈರ್ಮಲ್ಯ ಕಾಪಾಡಿಕೊಂಡು ಹೋಗುವುದು ಮತ್ತು ಜೀವನ ಮಟ್ಟ ಸುಧಾರಣೆಯ ಕಡೆ ಗಮನಿಸಿದರೆ ನಮ್ಮಲ್ಲಿ ಎಷ್ಟೋ ಕಾಯಿಲೆಗಳು ಬರದಂತೆಯೇ ತಡೆಯಬಹುದು.

ಭಾರತದಂಥ ಬೃಹತ್ ರಾಷ್ಟ್ರದಲ್ಲಿ ಸೋಂಕು ತಗಲದಂತೆ, ಅದು ಒಬ್ಬರಿಂದ ಮತ್ತೊಬ್ಬರಿಗೆ ಹರಡದಂತೆ ಮುನ್ನೆಚ್ಚರಿಕೆ ವಹಿಸುವ ರೋಗ ನಿರೋಧಕ ಮತ್ತು ಆರೋಗ್ಯ ಕಾಪಾಡಿಕೊಂಡು ಹೋಗುವ

ಚಟುವಟಿಕೆಗಳತ್ತ ಹೆಚ್ಚಿನ ನಿಗಾ ವಹಿಸಬೇಕಾದ ಅಗತ್ಯವಿದೆ. ಅಲ್ಲದೇ ನಮ್ಮೆಲ್ಲಾ ಸೌಲಭ್ಯಗಳು ಕೇವಲ ಪಟ್ಟಣ ಪ್ರದೇಶಗಳಲ್ಲೇ ಕೇಂದ್ರೀಕೃತವಾಗದಂತೆ ನೋಡಿಕೊಂಡು ರಾಜಧಾನಿಗಳಿಂದ ಬಹು ದೂರ ಇರುವ ಕುಗ್ರಾಮಗಳಿಗೆ ಇವು ಸಮರ್ಕವಾಗಿ ತಲುಪುವಂತೆ ಮಾಡಬೇಕಾದ್ದು ಅಷ್ಟೇ ಅವಶ್ಯಕ.

ಇನ್ನು ಮಹಿಳೆಯರ ಆರೋಗ್ಯದ ಬಗ್ಗೆ ಗಮನ ಹರಿಸಿದರೆ ಅದೊಂದು ಬಗೆಯ ಸಮಸ್ಯೆ. ಮಹಿಳೆಯರು ಹೆರುವ ಯಂತ್ರಗಳು ಎಂದು ಮನದಾಳದಲ್ಲಿ ಲಾಗಾಯ್ತಿನಿಂದಲೂ ಬಲವಾಗಿ ಬೇರೂರಿರುವ ಭಾವನೆ ಇನ್ನೂ ಕಿತ್ತೊಗೆಯಲು ಸಾಧ್ಯವಾಗಿಲ್ಲ. ಅವರ ಆರೋಗ್ಯದ ಜೊತೆ ಗರ್ಭಧಾರಣೆ, ಹೆರಿಗೆ, ಮಗುವಿನ ಆರೋಗ್ಯ ಇವೆಲ್ಲಾ ಬೆಸೆದುಕೊಂಡಿವೆ. ಆದ್ದರಿಂದಲೇ ಹೆರಿಗೆ ಆಸ್ಪತ್ರೆಗಳು, ಮಕ್ಕಳ ಆಸ್ಪತ್ರೆಗಳು ಆರಂಭವಾಗುತ್ತಿವೆಯೇ ಹೊರತು ಮಹಿಳೆಯರಿಗಾಗಿ ಪ್ರತ್ಯೇಕ ಆಸ್ಪತ್ರೆಗಳು ಅಲ್ಲ.

ಮಹಿಳೆಯರ ಆರೋಗ್ಯದ ಜೊತೆ ಹೆರಿಗೆಯನ್ನೂ ನಂಟು ಹಾಕುತ್ತೇವೆ. ಇದು ತಪ್ಪು ತಿಳುವಳಿಕೆ ಎಂದು ಅನೇಕ ಅಧ್ಯಯನಗಳು ಸಾಬೀತುಪಡಿಸಿವೆ. ಆದರೂ ನಮ್ಮ ಮನೋಭಾವದಲ್ಲಿ ಬದಲಾವಣೆ ಆಗಿಲ್ಲ.

ಇನ್ನು ವಿಭಿನ್ನ ಬಗೆಯ ಗರ್ಭನಿರೋಧಕಗಳಂತೂ ವಿವಾದದ ಅಲೆಯನ್ನೇ ಎಬ್ಬಿಸುತ್ತಿವೆ. 'ಪಿಲ್ಸ್'ನಿಂದ, 'ಕಾಪರ್-ಟಿ', ಗರ್ಭ ನಿರೋಧಕ ಚುಚ್ಚುಮದ್ದಿನವರೆಗಿನ ಸಾಧನಗಳ ದುಷ್ಪರಿಣಾಮಗಳ ಬಗ್ಗೆ ದಿನೇ ದಿನೇ ಹೊಸ ವಿಚಾರಗಳು ಬೆಳಕು ಕಾಣುತ್ತಿವೆ. ಸಂತಾನಹರಣ ಶಸ್ತ್ರ ಚಿಕಿತ್ಸೆಗಳಾದ ಟ್ಯೂಬೆಕ್ಟಮಿ ಮತ್ತು ವ್ಯಾಸೆಕ್ಟಮಿಯಲ್ಲೂ ತಾರತಮ್ಯ. ಈ ಶಸ್ತ್ರ ಚಿಕಿತ್ಸೆಗೆ ಮಹಿಳೆಯರು ಮಾತ್ರ ಒಳಗಾಗುತ್ತಿರುವುದು ಹೆಣ್ಣಿನ ಬಗ್ಗೆ ನಾವು ತಳೆದಿರುವ ಧೋರಣೆಗೆ ಹಿಡಿದ ಕನ್ನಡಿ.


ಯಾವ ಗರ್ಭ ನಿರೋಧಕ ಬಳಸಬೇಕು ಎಂಬುದನ್ನು ಆಯ್ಕೆ ಮಾಡಿಕೊಳ್ಳುವ ಸ್ವಾತಂತ್ರ್ಯವೂ ಮಹಿಳೆಯರಿಗಿಲ್ಲ. ಯೋಜನೆ ರೂಪಿಸುವವರ ಇಚ್ಛೆಗೆ ಅನುಗುಣವಾಗಿ ಸಾಧನಗಳು ಜನಪ್ರಿಯತೆ ಪಡೆಯುತ್ತವೆ. ತಿಳುವಳಿಕೆಯ ಕೊರತೆಯಿಂದ ವಿಧಿಯಿಲ್ಲದೆ ಮಹಿಳೆಯರು ಅದಕ್ಕೆ ಜೋತು ಬೀಳಬೇಕಾಗುತ್ತದೆ.

ಏನೇ ಆದರೂ ನಮ್ಮ ಕುಟುಂಬ ಯೋಜನೆಯ ಬಗ್ಗೆ ಮರುಚಿಂತನೆ ಮಾಡಬೇಕಾಗಿದೆ. ಇದಕ್ಕಾಗಿ ವೆಚ್ಚ ಮಾಡುತ್ತಿರುವ ಹಣ ದಿನೇ ದಿನೇ ಗಗನ ಮುಟ್ಟುತ್ತಿದೆ. ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಕುಟುಂಬ ಯೋಜನೆಯ ಉದ್ದೇಶಕ್ಕಾಗಿ ಕೇವಲ 14 ಲಕ್ಷ ರೂಪಾಯಿ ವೆಚ್ಚ ಮಾಡಲಾಗಿತ್ತು. ಇದು 5ನೆಯ ಯೋಜನೆಯ ಹೊತ್ತಿಗೆ 409 ಕೋಟಿ ರೂ. ಮುಟ್ಟಿತು. 6ನೇ ಯೋಜನೆಯಲ್ಲಿ 1,426 ಕೋಟಿ ಹೋಯಿತು. 7ನೇ ಯೋಜನೆಯಲ್ಲಿ 3,256 ಕೋಟಿ ರೂಪಾಯಿ ಸದರಿ ಉದ್ದೇಶಕ್ಕಾಗಿ ನಿಗದಿಪಡಿಸಬೇಕು ಎಂದು ಉದ್ದೇಶಿಸಲಾಗಿತ್ತು.

ಹೀಗೆ ವೆಚ್ಚ ಮಾತ್ರ ಶರವೇಗದಲ್ಲಿ ಏರುತ್ತಿದೆ. ಆದರೆ, ಜನನ ಪ್ರಮಾಣ ಕಳೆದ ಒಂದೂವರೆ ದಶಕದಿಂದ ಒಂದೇ ಪ್ರಮಾಣದಲ್ಲಿ ಸ್ಥಗಿತವಾಗಿದೆ. ಸಾಮಾಜಿಕ ಸಮಸ್ಯೆಯೊಂದಕ್ಕೆ ತಾಂತ್ರಿಕ ಪರಿಹಾರ ಹುಡುಕಲು ಹೊರಟಿರುವುದೇ ಇದು ಈ ರೀತಿ ಆಗಲು ಕಾರಣ.

ಸರ್ಕಾರ ಈಗಲಾದರೂ ಕಣ್ತೆರೆದು ನೋಡಿ ಲೋಪದೋಷಗಳನ್ನು ಸರಿಪಡಿಸುವುದರ ಜೊತೆಗೆ ಜನಸಮುದಾಯದ ಎಲ್ಲ ವರ್ಗಗಳಿಗೂ ವೈದ್ಯಕೀಯ ಸೌಲಭ್ಯಗಳು ಸುಲಭವಾಗಿ ದೊರೆಯುವಂಥ ಸಮಗ್ರ ನೀತಿಯೊಂದನ್ನು ರೂಪಿಸಬೇಕು ಮತ್ತು ಅವು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳಲು ಕಾಲಮಿತಿ ಯೋಜನೆಗಳನ್ನು ಹಾಕಿಕೊಳ್ಳಬೇಕಾಗಿದೆ.

★



# ಕರ್ನಾಟಕದಲ್ಲಿ ಮಹಿಳೆಯರ ಸ್ಥಿತಿಗತಿಗಳು

★ ಡಾ. ಬಿ. ಎಸ್. ಸುಮಿತ್ರಾಬಾಯಿ

ಇಲ್ಲಿ ಸ್ತ್ರೀಯರ ಸ್ಥಿತಿಗತಿಗಳ ನಿಜಸ್ವರೂಪವನ್ನು ಅರಿಯಲು ಈ ಸಮಾಜದ ಒಟ್ಟು ರಚನೆ, ಅದರಲ್ಲಿರುವ ವಿವಿಧ ಸ್ತರಗಳು, ಅವುಗಳಲ್ಲಿ ಮಹಿಳೆಯರಿಗಿರುವ ಸ್ಥಾನ ಮತ್ತು ಪಾತ್ರಗಳೇನು ಎಂಬುವುದನ್ನು ಅರಿಯಲು ಯತ್ನಿಸಬೇಕು. ಏಕೆಂದರೆ ಒಂದು ಸಮಾಜದ ರಚನಾ ರೀತಿಗೂ ಅದರೊಳಗಿನ ಸ್ತ್ರೀಯರ ಸ್ಥಾನಮಾನಗಳಿಗೂ ನಿಕಟವಾದ ಸಂಬಂಧವಿರುತ್ತದೆ. ಸಮಾಜದ ಒಟ್ಟು ರಚನೆಯಲ್ಲಿ ತೀವ್ರ ಬದಲಾವಣೆಯಾದಲ್ಲಿ ಮಾತ್ರ ಸ್ತ್ರೀಯರ ಸ್ಥಿತಿಗತಿಗಳು ಕ್ರಾಂತಿಕಾರಕವಾಗಿ ಬದಲಾಗಬಲ್ಲವು.

ಗತಕಾಲದ ಆದರ್ಶಗಳನ್ನು ಇಂದಿನ ವಾಸ್ತವಾಂಶಗಳ ಜೊತೆ ಅಥವಾ ಇಂದಿನ ನಿರೀಕ್ಷೆಗಳನ್ನು ಹಿಂದಿನ ವಸ್ತುಸ್ಥಿತಿಯ ಜೊತೆ ಹೋಲಿಸುತ್ತಾ ಸ್ತ್ರೀಯರ ಸ್ಥಾನಮಾನ ನಿರ್ಧರಿಸಲು ಹೊರಡುವುದು ಗೊಂದಲಕರ, ಅವೈಜ್ಞಾನಿಕ. ನಿಜವಾದ ಸಮಾಜಶಾಸ್ತ್ರೀಯ ದೃಷ್ಟಿಕೋನವು, ವಾಸ್ತವಾಂಶಗಳನ್ನು ವಾಸ್ತವಾಂಶಗಳೊಂದಿಗೂ, ಆದರ್ಶಗಳನ್ನು ಆದರ್ಶಗಳೊಂದಿಗೂ ತುಲನೆ ಮಾಡುವುದನ್ನು ಬಯಸುತ್ತದೆ. ಹೀಗೆ ತುಲನೆ ಮಾಡುವಾಗಲೂ 'ಒಟ್ಟಾಗಿ ಮಹಿಳೆಯರು' ಎಂದು ಎಣಿಸುವುದು ತಪ್ಪಾಗುತ್ತದೆ. ಏಕೆಂದರೆ ಧರ್ಮ, ಭಾಷೆ, ಪ್ರಾಂತ್ಯ, ಭೌಗೋಳಿಕ ಸ್ಥಿತಿ, ಪ್ರಾಕೃತಿಕ ಪರಿಸರದಲ್ಲಿನ ವೈವಿಧ್ಯತೆಯಿಂದಾಗಿ ನಮ್ಮ ದೇಶ ವಿಭಿನ್ನ ಸಂಸ್ಕೃತಿಯ ಸಂಕೀರ್ಣವಾಗಿದೆ. ಇದರೊಳಗಿರುವ ಅಸಂಖ್ಯಾತ ಜಾತಿಗಳು, ಉಪಜಾತಿಗಳು, ಬುಡಕಟ್ಟು ಜನಾಂಗಳಲ್ಲಿ ಒಳಸ್ತರಗಳಲ್ಲಿ ಹಾಸುಹೊಕ್ಕಾಗಿರುವ ಮೇಲು–ಕೀಳುಗಳೊಳಗೆ ಸ್ತ್ರೀಯರು ಹಂಚಿಹೋಗಿದ್ದಾರೆ. ಆದ್ದರಿಂದ ಈ ದೇಶದಲ್ಲಿನ ಸ್ತ್ರೀಯರೆಲ್ಲರನ್ನೂ ಭಾರತೀಯರೆಂದು ಕರೆದರು. ಅವರೆಲ್ಲರ ಸ್ಥಿತಿಗಳು ಸಮಾನ ರೀತಿಯದಲ್ಲ. ಹಿಂದೂ ಧರ್ಮ, ಇಸ್ಲಾಂ ಧರ್ಮಗಳ ಸ್ತ್ರೀಯರ ಸ್ಥಿತಿಗಳು ಬೇರೆ ಬೇರೆ. ಇಂಡೋ ಆರ್ಯನ್ ಭಾಷಾ ಗುಂಪಿನ ಸ್ತ್ರೀಯರ ಸ್ಥಿತಿಗೂ ದ್ರಾವಿಡ ಭಾಷಾಗುಂಪಿನ ಸ್ತ್ರೀಯರ ಸ್ಥಿತಿಗೂ ಅಂತರವಿದೆ. ಗೋಧಿ ಬೆಳೆವ ನೆಲದ ಹಳ್ಳಿಗಳ ಹೆಣ್ಣುಗಳ ಪರಿಸ್ಥಿತಿಗೂ, ರಾಗಿ, ಭತ್ತಗಳನ್ನು ಬೆಳೆವ ಹಳ್ಳಿಗಳ ಹೆಣ್ಣುಮಕ್ಕಳ ಸ್ಥಿತಿಗೂ ತುಂಬ ಅಂತರವಿದೆ. ಆದ್ದರಿಂದ ಸ್ತ್ರೀಯರು ಯಾವ ಪ್ರದೇಶಕ್ಕೆ ಸೇರಿದವರು, ಅವರಿರುವ ಭೌಗೋಳಿಕ ಪರಿಸರವೆಂಥಾದ್ದು, ಅಲ್ಲಿರುವ ಉತ್ಪಾದನಾ ವ್ಯವಸ್ಥೆಯ ಸ್ವರೂಪವೇನು ? ಅದರಲ್ಲಿ ಸ್ತ್ರೀ–ಪುರುಷರಿಗಿರುವ ಅಧಿಕಾರವೆಷ್ಟು ಎಂಬ ಅಂಶಗಳನ್ನು ಗಮನಿಸಿ ಸ್ತ್ರೀಯರ ಸ್ಥಿತಿಗಳನ್ನು ಗುರುತಿಸಬೇಕು. ಈ ದೃಷ್ಟಿಯಿಂದ ನಾವು ಕರ್ನಾಟಕದ ಮಹಿಳೆಯರ ಸ್ಥಿತಿಗತಿಗಳನ್ನು ಕುರಿತು ಪರಿಚಯ ಪಡೆಯುವುದು ನಮಗೆ ಅತ್ಯಂತ ನಿಕಟವಾದ, ನಮ್ಮನ್ನೂ ಒಳಗೊಂಡಿರುವ ಪರಿಸರದ ಪರಿಚಯವೂ ಆಗಿರುತ್ತದೆ.

ಕೃಷಿ ಉತ್ಪಾದನೆಯನ್ನು ಮುಖ್ಯವಾಗಿ ಹೊಂದಿದ್ದು, ಜಮೀನುದಾರಿ ವ್ಯವಸ್ಥೆ ಇನ್ನೂ ಪೂರ್ಣವಾಗಿ ಹೋಗಿಲ್ಲದ ಗ್ರಾಮೀಣ ಸಂಸ್ಕೃತಿಯೇ ಪ್ರಧಾನವಾದ ಕರ್ನಾಟಕದೊಳಗೆ, ಮಲೆನಾಡು, ಬಯಲುಸೀಮೆ, ಕರಾವಳಿ ಭಾಗಗಳಲ್ಲಿ, ವಿವಿಧ ಆಡು ಭಾಷೆಗಳ ಸಾಂಸ್ಕೃತಿಕ ವಲಯಗಳಲ್ಲಿ ಹಂಚಿಹೋದ ಮಹಿಳೆಯರ ನಿಜವಾದ ಸ್ಥಿತಿಗಳು ಸಾಮಾನ್ಯವಾಗಿ ಶಿಕ್ಷಣ, ಉದ್ಯೋಗ, ಆರೋಗ್ಯ ಎಂಬ ಮೂರು ಕ್ಷೇತ್ರಗಳಿಂದ ಮಹಿಳೆಯರ ಪ್ರಗತಿಯನ್ನು ಅಳೆಯಲಾಗುತ್ತದೆ. ಶೈಕ್ಷಣಿಕ, ಔದ್ಯೋಗಿಕ ಹಾಗೂ ಆರೋಗ್ಯದ ಕ್ಷೇತ್ರಗಳಲ್ಲಿ ನಮ್ಮ ಮಹಿಳೆಯರ ಸ್ಥಿತಿ ಹೇಗಿದೆ ? ಅದರ ಸುಧಾರಣೆಗೆ ನಡೆಧಿರುವ ಯತ್ನ

ಗಳೇನು? ಅವು ಎಷ್ಟು ಸಫಲವಾಗಿವೆ? ವಿಫಲವಾಗಿದ್ದರೆ ಅದಕ್ಕೆ ಕಾರಣಗಳು ಯಾವುವು? ಆ ಸಮಸ್ಯೆಗಳ ಸ್ವರೂಪವೇನು? ಪರಿಹಾರವೇನು? ಎಂಬ ಪ್ರಶ್ನೆಗಳಿಗೆ ಕೆಲಮಟ್ಟಿಗೆ ಉತ್ತರ ಕಂಡುಕೊಳ್ಳಲು ಇಲ್ಲಿ ಯತ್ನಿಸಬಹುದು. ಈ ಮೂರು ಕ್ಷೇತ್ರಗಳು ಪರಸ್ಪರ ಪ್ರತ್ಯೇಕಗೊಂಡಿರುವ ಕೋಟೆಗಳಲ್ಲಿ, ಇವು ಆಂತರಿಕವಾಗಿ ಬೆಸೆದುಕೊಂಡಿರುವ ಘಟಕಗಳು. ಒಂದು ಮತ್ತೊಂದನ್ನು ಪ್ರಭಾವಿಸುತ್ತಿರುತ್ತವೆ ಎಂಬುದನ್ನು ಮರೆಯುವಂತಿಲ್ಲ.

ಈ ಮೂರೂ ಕ್ಷೇತ್ರಗಳನ್ನೂ ತನ್ನ ಹಿಡಿತದಲ್ಲಿಟ್ಟುಕೊಂಡಿರುವ ಬಲಿಷ್ಟ ವಿಚಾರಧಾರೆಯೊಂದು ಸಹಸ್ರಾರು ವರ್ಷಗಳಿಂದ ರೂಢಿಗತವಾಗಿದೆ. ಹೆಂಗಸು ಗಂಡಸಿಗಿಂತ ಶಾರೀರಿಕವಾಗಿ ದುರ್ಬಲಳು. ಗಂಡಸಿನ ರಕ್ಷಣೆಯಲ್ಲಿ ಉಳಿಯಬೇಕಾದಂಥ ಅಸಹಾಯಕತೆ, ಗರ್ಭಧಾರಣೆ, ಹೆರಿಗೆಗಳಂಥ ಸ್ಥಿತಿಯಿಂದಾಗಿ ಆಕೆಗಿದೆ. ಗಂಡಸರು ಮಾಡಬಲ್ಲ ಕಷ್ಟಕರವಾದ ಕೆಲಸಗಳನ್ನು ಹೆಂಗಸರು ಮಾಡಲಾರರು. ಅವರು ಪರಾವಲಂಬಿಗಳು. ಆದ್ದರಿಂದ ಉತ್ಪಾದನೆಯ ಸಂಪನ್ಮೂಲಗಳ, ಉತ್ಪಾದನಾ ಸಾಧನಗಳ ಮೇಲೆ ಅವರಿಗೆ ಹಕ್ಕಿಲ್ಲ. ಆರ್ಥಿಕವಾಗಿ ಉತ್ಪಾದಿಸುವ ಸಾಮರ್ಥ್ಯ ಅವರಿಗಿಲ್ಲವಾಗಿ, ಸಾಮಾಜಿಕವಾಗಿ, ಧಾರ್ಮಿಕವಾಗಿ ಕೂಡ ಸ್ತ್ರೀಯರು ಪುರುಷರಿಗಿಂತ ಕೆಳಗೆ ಇರುವವರು/ಇರಬೇಕಾದವರು—ಎಂದು ಆ ವಿಚಾರಧಾರೆ ಇಲ್ಲಿನ ಸ್ತ್ರೀಯರನ್ನು ನಿಯಂತ್ರಿಸುತ್ತದೆ.

ಬೇಟೆಗಾರಿಕೆ, ಕುಟುಂಬಕ್ಕಾಗಿ ಆಹಾರ ಕೂಡಿಡುವ ಕೆಲಸಗಳನ್ನು ಗಂಡಸರು, ಹೆಂಗಸರು ಹಂಚಿಕೊಂಡಾಗ—ಅವುಗಳಲ್ಲಿ ಮೇಲು–ಕೀಳು ಭಾವನೆ ಇದ್ದಿರಲಿಕ್ಕಿಲ್ಲ. ಆದರೂ ಹೇಗೂ ಬೇಟೆಯ ಮುಖ್ಯ ಪ್ರತಿಷ್ಠಿತ ಕಾರ್ಯವಾಗಿಬಿಟ್ಟು, ನಿಜದಲ್ಲಿ ಅದಕ್ಕಿಂತ ಹೆಚ್ಚಿನ ಹೊಣೆ ಬಯಸುತ್ತಿದ್ದ ಆಹಾರ ಸಂಗ್ರಹಣೆ, ಜೀವನಾಧಾರ ಉತ್ಪಾದನೆಯ ಹೆಣ್ಣಿನ ಕೆಲಸಗಳು ಕಡಿಮೆ ಎನ್ನಿಸಿಕೊಂಡವು. ಈ ರೀತಿ ದುಡಿಮೆಗೆ ಭಿನ್ನರೀತಿಯ ಬೆಲೆ ಕಟ್ಟುವಂತೆ ಮಾಡುವಲ್ಲಿ ಕೇವಲ ಆರ್ಥಿಕ ಕಾರಣಗಳಷ್ಟೇ ಇಲ್ಲ. ಆರ್ಥಿಕೇತರವಾದ ಪಿತೃಪ್ರಧಾನ ವ್ಯವಸ್ಥೆಯ ಸಂಬಂಧದ ಕಾರಣಗಳೂ ಕೆಲಸ ಮಾಡಿವೆ. ಈ ಆರ್ಥಿಕ, ಆರ್ಥಿಕೇತರ ಶಕ್ತಿಗಳೆರಡೂ ಒಟ್ಟಾಗಿದ್ದರ ಫಲವಾಗಿ ನಮ್ಮ ಸಮಾಜದಲ್ಲಿ ಸ್ತ್ರೀಯರ ಸ್ಥಾನ ಸಾಂಸ್ಕೃತಿಕವಾಗಿ ಪುರುಷನದಕ್ಕಿಂತ ಕೆಳಗೇ ಉಳಿದಿರುವಂಥ ಒತ್ತಡಗಳನ್ನು ಸೃಷ್ಟಿಸಿ, ಬೆಳೆಸಿರುವುದಂತೂ ನಿಜ. ನೆಲದ ಒಡೆತನ, ಬೇಸಾಯದ ಹಕ್ಕು, ಬೇಸಾಯದ ಉಪಕರಣಗಳ ಮೇಲೆ ಹಿಡಿತ ಇವೆಲ್ಲ ಗಂಡಸರ ಕೈಯಲ್ಲಿರುವ ವ್ಯವಸ್ಥೆ ಯಾವಾಗ, ಎಷ್ಟು ಕಾಲದಿಂದ ಈ ದ್ರಾವಿಡ ಮೂಲ ನಾಡಿನೊಳಗೆ ಜಾರಿಗೆ ಬಂದಿವೆಯೆಂಬುದರ ಖಚಿತ ಇತಿಹಾಸದ ಅರಿವು ಲಭ್ಯವಿಲ್ಲ. ಆದರೂ ಕುಟುಂಬದಲ್ಲಿ, ಸಮಾಜದಲ್ಲಿ ನಿರ್ವಹಿಸಬೇಕಾದ ಸ್ತ್ರೀ–ಪುರುಷರ ಪಾತ್ರಗಳಲ್ಲಿರುವ ಅಂತರಕ್ಕೂ, ಉತ್ಪಾದನಾ ಸಂಪನ್ಮೂಲ, ಫಲಗಳ ಮೇಲಿನ ಹಕ್ಕು, ಜವಾಬ್ದಾರಿಗಳಲ್ಲಿ ಇರುವ ಅಸಮಾನತೆಗೂ ಗಾಢವಾದ ಸಂಬಂಧವಿದೆ.

ನಮ್ಮ ಕುಟುಂಬಗಳ ರಚನೆ, ಮಕ್ಕಳ ರಕ್ಷಣೆ, ಸಮಾಜೀಕರಣ, ಶಾಲಾ ಬದುಕುಗಳು ಹೆಣ್ಣಿನ ವಿಷಯದಲ್ಲಿ ಕೆಲಸ ಮಾಡುವ ಬಗೆ ಬಹುತೇಕ ಒಂದೇ ರೀತಿಯದು. ಅವಳು ಯಾವ ವಿಧದಲ್ಲೂ ಗಂಡಸಿಗೆ ಸಮಾನಳಲ್ಲ, ಆ ನೆಲೆಗೆ ಏರುವುದಕ್ಕೂ ಅವಳಿಗಿಲ್ಲ ಎಂಬ ರೀತಿಯ ಸಿದ್ಧಪಾತ್ರಗಳನ್ನೂ, ಅಂಥಹುದೇ ಮೌಲ್ಯಗಳನ್ನು ಈ ಎಲ್ಲ ಸಂಸ್ಥೆಗಳೂ ಬಲಪಡಿಸುತ್ತಿವೆ ಸ್ತ್ರೀ–ಪುರುಷರಿಗೆ ಒಂದೇ ರೀತಿಯ ಶಿಕ್ಷಣ ದೊರೆತಲ್ಲಿ ನಮ್ಮ ಹುಡುಗರು, ಹುಡುಗಿಯರು ಸಮಾಜೀಕರಣಗೊಳ್ಳುವ ಬಗೆಯಲ್ಲಿ, ಅವರ ಧೋರಣೆಗಳಲ್ಲಿ ಬದಲಾವಣೆ ಸಾಧ್ಯ. ಹೆಣ್ಣುಮಕ್ಕಳಲ್ಲಿ ರೂಢಿಗತವಾಗಿರುವ ಕೀಳರಿಮೆಗಳು ಬದಲಾಗಿ ತಮ್ಮತನದ ಅರಿವು, ಆತ್ಮವಿಶ್ವಾಸ ಹೆಚ್ಚಲು ಸಾಧ್ಯ. ಆದರೆ ಸಂವಿಧಾನ ನೀಡಿರುವ ಸಮಾನತೆ ಬೇರೆ. ನಿಜದ ಬದುಕಲ್ಲಿ ಆಚರಣೆಯಾಗುತ್ತಿರುವ ಭೇದಭಾವದ ದಬ್ಬಾಳಿಕೆಗಳೇ ಬೇರೆ. ಹಿಂದಕ್ಕೆ ಹೋಲಿಸಿದರೆ ಇಂದು ಶಿಕ್ಷಣದ ವ್ಯಾಪ್ತಿ ಹೆಚ್ಚಿದೆ. ಉದ್ಯೋಗಾವಕಾಶಗಳು ದೊರೆತಿವೆ. ಕಾನೂನುದತ್ತ ಸವಲತ್ತುಗಳು, ಹಕ್ಕುಗಳೂ ದೊರೆತಿವೆ. ಆದರೆ ಇವೆಲ್ಲದರ ಉಪಯೋಗ ಪಡೆಯುವ ಸಾಧ್ಯತೆಯುಳ್ಳ ಸ್ತ್ರೀಯರ ಸಂಖ್ಯೆ ಮಾತ್ರ ತೀರಾ ಕಡಿಮೆ. ನಮ್ಮ ನಾಡಿನ ಬಹುಸಂಖ್ಯಾತ ಹೆಣ್ಣುಮಕ್ಕಳು ಇವುಗಳಿಂದ ವಂಚಿತರು. ಏಕೆ ಹೀಗಾಗಿದೆ?

## ಶೈಕ್ಷಣಿಕ ಕ್ಷೇತ್ರದಲ್ಲಿ........

ಕುಟುಂಬದ ನಂತರ ಮಕ್ಕಳಲ್ಲಿ ಹೊಸ ವ್ಯಕ್ತಿತ್ವ ಬಿತ್ತಿ ರೂಪಿಸಬಲ್ಲ ಶಕ್ತಿಯಿರುವ ಸಂಸ್ಥೆ ಶಾಲೆ. ಆದರೆ ನಮ್ಮ ಶಾಲಾ ಪಠ್ಯದಲ್ಲಿ, ಅದನ್ನು ಕಲಿಸುವ

ವಿಧಾನದಲ್ಲಿ ಸ್ತ್ರೀ–ಪುರುಷರ ಸಮಾನತೆಯ ಸಂದೇಶ ಪರಿಣಾಮಕಾರಿಯಾಗಿ ಅಳವಡಿಸಲ್ಪಟ್ಟಿಲ್ಲ. ಮಧ್ಯಮ ಮೇಲು ಜಾತಿ, ವರ್ಗದ ಜನರ ಪರಿಕಲ್ಪನೆಗೆ ತಕ್ಕಂತೆ ಸ್ತ್ರೀ–ಪುರುಷರ ಪಾತ್ರಗಳನ್ನು ಶಿಕ್ಷಣವು ಬಿಂಬಿಸುತ್ತಿದೆ. ತಾರತಮ್ಯವನ್ನು ಉಳಿಸಿಡುವುದಕ್ಕೆ ಅದೂ ಒಂದು ಸಾಧನವಾಗುತ್ತಿದೆ. ರಾಷ್ಟ್ರೀಯ ಶಿಕ್ಷಣ ನೀತಿ ಲಿಂಗ ತಾರತಮ್ಯವನ್ನು ನಿವಾರಿಸಬೇಕೆಂದು ಘೋಷಿಸಿದ್ದರೂ, ರಾಜ್ಯ ಸರ್ಕಾರಗಳು ಮಾತ್ರ ಬಾಲಕ–ಬಾಲಕಿಯರ ಶಿಕ್ಷಣಗಳಲ್ಲಿ ಅಂತರವನ್ನು ಉಳಿಸಿಡುತ್ತಲೇ ಬಂದಿವೆ. ಹುಡುಗಿಯರ ಶಿಕ್ಷಣದಲ್ಲಿ ಉದ್ಯೋಗ ತರಬೇತಿಯ ಅಂಶಗಳಿಗೆ ಆದ್ಯತೆಯಿರುವುದಿಲ್ಲ. ಹೆಂಗಸರೇನು ಓದಿ ಗಳಿಸಬೇಕೆ ? ಎಂಬುದರಿಂದ ಹಿಡಿದು 'ಹೆಂಗಸಿನ ಗಳಿಕೆ ಮನೆಗೆ ಪೂರಕವೇ ಹೊರತು, ಅದೇ ಪ್ರಧಾನವಲ್ಲ' ಎಂಬುದರವರೆಗೂ ಇರುವ ನಂಬಿಕೆಗಳು ಇಲ್ಲಿ ಕೆಲಸ ಮಾಡುತ್ತವೆ. ಪಠ್ಯೇತರ ಚಟುವಟಿಕೆಗಳನ್ನು ಹುಡುಗಿಯರಿಗೆ ಮಾತ್ರ ನಿರಾಕರಿಸುವ ಸಹಶಿಕ್ಷಣ ಶಾಲೆಗಳಿರುವಂತೆ, ಹುಡುಗಿಯರಿಗೇ ಮೀಸಲಾದ ಶಾಲೆಗಳಲ್ಲಿ ಆಹಾರ ಸಂರಕ್ಷಣೆ, ಹೂದಾನಿ ವಿನ್ಯಾಸ ರಚನೆ, ಕಸದಿಂದ ರಸ—ಮುಂತಾದ ಕುಟುಂಬವನ್ನೇ ಗುರಿಯಾಗಿಟ್ಟುಕೊಂಡ ಪಠ್ಯೇತರ ಚಟುವಟಿಕೆಗಳೇ ಹುಡುಗಿಯರಿಗೆ ಸಾಕು ಎಂಬ ಧೋರಣೆಯಿರುತ್ತವೆ.

ಹಳ್ಳಿಗಳ ಚಿಕ್ಕ ಪಟ್ಟಣಗಳ ಶಾಲೆಗಳಲ್ಲಿ ಇಂಥ ತಾರತಮ್ಯಗಳು ವ್ಯಾಪಕವಾಗಿವೆ. ಹುಡುಗಿಯ 'ಕಲಿಕೆ' ಆಪತ್ಕಾಲದ 'ವಿಮೆ'ಯಿದ್ದ ಹಾಗೆ. ಮದುವೆಯಾಗದೇ ಹೋದರೆ, ಗಂಡ ಅಥವಾ ತಂದೆ ತೀರಿಕೊಂಡರೆ, ಗಂಡ ಬಿಟ್ಟುಬಿಟ್ಟರೆ–ಅಂಥ ಪರಿಸ್ಥಿತಿಯಲ್ಲಿ ಒಂದು ಕೆಲಸವನ್ನು ಹಿಡಿಯಲು ನೆರವಾದೀತೆಂಬುದೇ ಇಲ್ಲಿರುವ 'ಮಹತ್ವಾಕಾಂಕ್ಷೆ'. ಉಳಿದಂತೆ ಹೇಗೂ ಪರರ ಮನೆ ಸೇರುವವರು, ಅವರ 'ಕಲಿಕೆಗೇಕೆ ಹಣ ಖರ್ಚು ಮಾಡಬೇಕು, ಎಂಬ ಧೋರಣೆ. ಕಲಿತ ಹುಡುಗಿಗೆ ಒಳ್ಳೆಯ ಕಡೆ ಮದುವೆಯಾದೀತೆಂಬ ಆಸೆಯಿರುವಂತೆಯೇ ಹೆಚ್ಚು ಕಲಿತರೆ, ಹೆಚ್ಚು ವರದಕ್ಷಿಣೆ ತೆರಬೇಕಾದೀತೆಂಬ ಅಂಜಿಕೆಯೂ ಸೇರುತ್ತದೆ. ಹಳ್ಳಿಗಳಲ್ಲಿ ಜಾತಿಗಿಂತ ಆರ್ಥಿಕ ಪರಿಸ್ಥಿತಿ ಹುಡುಗಿಯರ ಶಿಕ್ಷಣಕ್ಕೆ ದೊಡ್ಡ ಅಡ್ಡಿ. ಹಣದ ತೊಂದರೆ ಇಲ್ಲದಾಗ ಹುಡುಗರು–ಹುಡುಗಿಯರಿಬ್ಬರನ್ನೂ ಓದಲು ಕಳಿಸಲು ಸಿದ್ಧರಿರುವ ತಾಯ್ತಂದೆಗಳು, ಹಣದ ಬಿಕ್ಕಟ್ಟು ಎದುರಾದಾಗ, ಆದ್ಯತೆ ಪ್ರಶ್ನೆ ಬಂದಾಗ ಹುಡುಗರ ಶಿಕ್ಷಣವನ್ನು ಮುಖ್ಯವೆಂದೂ, ಅದು ಕುಟುಂಬಕ್ಕೆ ಆಧಾರವಾದೀತೆಂದೂ ನಂಬುತ್ತಾರೆ. ಹುಡುಗನೊಬ್ಬ ಶಾಲೆ ಬಿಟ್ಟರೆ, ಅದರ ಹಿಂದೆ ಆರ್ಥಿಕ ದುಸ್ಥಿತಿ ಮಾತ್ರ ಕಾರಣವಾಗಿರುತ್ತದೆ. ಆದರೆ ಹುಡುಗಿಯರನ್ನು ಶಾಲೆಯಿಂದ ಬಿಡಿಸಲು 'ಅವಳಿಗೆ ಮದುವೆ ಮಾಡಬೇಕು' 'ನಮಗೆ ಮನೆ ಕೆಲಸಕ್ಕೆ ನೆರವಾಗಲಿ' 'ಅವಳು ತಮ್ಮ. ತಂಗಿಯರನ್ನು ನೋಡಿಕೊಳ್ಳಲಿ' 'ವರದಕ್ಷಿಣೆ ಕಡಿಮೆ ಆದೀತು' ಮುಂತಾಗಿ ಬಗೆಬಗೆಯ ಕಾರಣಗಳಿರುತ್ತವೆ. ಹುಡುಗಿ ಎಂದರೆ ಹೊರೆ, ಬೇಗ ಮದುವೆ ಮಾಡಿ ಈ ಹೊರೆಯನ್ನು ಇಳಿಸಿಕೊಳ್ಳಬೇಕೆಂಬ ಕಾತರ. ಅದಕ್ಕಾಗಿ ಪದವಿ ಹಂತದಲ್ಲಿದ್ದರೂ ಒಳ್ಳೆಯ ವರ ಸಿಕ್ಕಿದ್ದಾನೆಂದು ಮಗಳ ಶಿಕ್ಷಣ ಮೊಟಕು ಮಾಡಿ, ಮದುವೆ ಮಾಡುವ ತಾಯ್ತಂದೆಗಳಿದ್ದಾರೆ.

'ಹುಡುಗಿಯರೂ ತಮ್ಮ ಬದುಕು ತಾವೇ ನಿರ್ವಹಿಸಬಲ್ಲರು, ಅವರೂ ಸಂಪಾದಿಸಬಲ್ಲ ಸ್ವತಂತ್ರ ವ್ಯಕ್ತಿಗಳು, ಅಗತ್ಯವಿರುವಾಗ ಕುಟುಂಬದ ಆಧಾರ ಅವರೂ ಆಗಬಲ್ಲರು' ಎಂಬ ಇತ್ಯಾತ್ಮಕ ಧೋರಣೆಯನ್ನು ನಮ್ಮ ಶಿಕ್ಷಣ, ಕುಟುಂಬ ವ್ಯವಸ್ಥೆಗಳು ಹುಟ್ಟುಹಾಕುವುದಿಲ್ಲ. ಶಿಕ್ಷಕರಲ್ಲೂ ಬಹಳಷ್ಟು ಜನರಿಗೆ ಶಿಕ್ಷಣವು ಸಾಮಾಜಿಕ ಬದಲಾವಣೆಗೆ ಪ್ರಬಲವಾದ ಅಸ್ತ್ರ ಎಂಬ ಅರಿವೇ ಇರುವುದಿಲ್ಲ. ಅವರ ಶಿಕ್ಷಣ ತರಬೇತಿ ಈ ಅಂಶವನ್ನು ಅವರಲ್ಲಿ ಬೆಳೆಸುವಂತೆ ರೂಪುಗೊಂಡಿಲ್ಲ. ಸ್ವತಃ ಯಾವುದೇ ಹೊಸ ಬದಲಾವಣೆಗಳನ್ನು ಎದುರಿಸಬಲ್ಲ ಮಾನಸಿಕ ಸಿದ್ಧತೆ ಇವರಲ್ಲಿ ಇರುವುದಿಲ್ಲ. ಆದ್ದರಿಂದ ಇಂಥ ಶಿಕ್ಷಕರಿಗೆ ಮೂಲಭೂತ ತರಬೇತು ಅತ್ಯಗತ್ಯ.

## ಔದ್ಯೋಗಿಕ ಕ್ಷೇತ್ರದಲ್ಲಿ

ಸ್ತ್ರೀ–ಪುರುಷರ ನಡುವಿನ ಅಸಮಾನತೆ ಎದ್ದು ತೋರುವ ಮತ್ತೊಂದು ಕ್ಷೇತ್ರ ಉದ್ಯೋಗದ್ದು. ಇಲ್ಲಿಯ ನಿರಕ್ಷರತೆ, ಬಡತನ, ಸಾಮಾಜಿಕ ಅಸಮಾನತೆಗಳು ದುಡಿಮೆಯ, ವೃತ್ತಿಗಳ ಆಯ್ಕೆಯನ್ನು ನಿಯಂತ್ರಿಸುತ್ತಿರುತ್ತವೆ. ಗ್ರಾಮಗಳಲ್ಲಿ ಕೆಳಜಾತಿ ವರ್ಗಗಳ ಸ್ತ್ರೀಯರ ಉದ್ಯೋಗ, ದುಡಿಮೆ, ಸ್ಥಿತಿಗತಿಗಳು ಅದೇ ಪರಿಸರದ ಮಧ್ಯಮ ಹಾಗೂ ಮೇಲು ಜಾತಿ, ವರ್ಗಗಳ ಸ್ತ್ರೀಯರದ್ದಕ್ಕಿಂತ ಭಿನ್ನವಾದದ್ದು. ಕೆಳಜಾತಿ ವರ್ಗಗಳ ಸ್ತ್ರೀಯರು ತಮ್ಮ ಗಂಡಸರ

ದುಡಿಮೆಯ ಕ್ಷೇತ್ರದಲ್ಲಿ ಸಮ ಸಮ, ಕೆಲವು ಸಲ ಅವರಿಗಿಂತ ಹೆಚ್ಚಾದ ಹೊಣೆಯನ್ನು ಹೊತ್ತಿರುತ್ತಾರೆ. ಹೊಲ, ಗದ್ದೆ, ತೋಟಗಳ ದುಡಿಮೆ, ತಮ್ಮ ಮನೆಯೊಳಗಿನ ಕೌಟುಂಬಿಕ ದುಡಿಮೆಯಲ್ಲದೆ ಕೂಲಿಗಾಗಿಯೂ ದುಡಿಯಬೇಕಾದ್ದು ಅವರಿಗೆ ಇರುತ್ತದೆ. ಬೇಸಾಯ, ಭೂ ಒಡೆತನದ ಹಕ್ಕು ಪುರುಷರಿಗೇ ಸೇರಿದ್ದು, ಆದರೆ ಕೆಳವರ್ಗ, ಜಾತಿಗಳ ಪುರುಷರೂ ಭೂರಹಿತ ದುಡಿಮೆಗಾರರೇ ಆಗಿದ್ದಾಗ ಸಂಪನ್ಮೂಲತೆಯ ಮೇಲೆ ಅಧಿಕಾರವಿರದ ಸ್ಥಿತಿ ಇಬ್ಬರದೂ ಹೌದು. ಹಾಗಿದ್ದರೂ ಲಿಂಗಾಧಾರಿತ ಭೇದ ಭಾವಗಳು ಇವರ ದುಡಿಮೆಗೆ ಕೆಳಗಿನ ಸ್ಥಾನ ದೊರೆಯಲು ಕಾರಣವಾಗುತ್ತದೆ. ಯಜಮಾನರು, ಮಾರುಕಟ್ಟೆ ಒಡೆಯರು. ಬಿಟ್ಟಿ ಕೆಲಸ, ಮೈಮುರಿವ ಕೆಲಸ, ಕಡಿಮೆ ಕೂಲಿಯ ಕೆಲಸ ಹಾಗೂ ಸುತ್ತುವರಿ ಕೆಲಸಗಳಿಗೆ ಈ ಕೆಳಜಾತಿ, ವರ್ಗಗಳ ಹೆಣ್ಣಾಳುಗಳನ್ನೇ ಆರಿಸುತ್ತಾರೆ. ಈ ದುಡಿಮೆಯಿಂದ ಆದಾಯವಿರದು. ಇದ್ದರೂ ನಗಣ್ಯ. ಅದರಿಂದಾಗಿ ಮನೆಯಲ್ಲಿ, ಸಮಾಜದಲ್ಲಿ ಇವರ ಸ್ಥಾನ-ಮಾನ ಎಳ್ಳಷ್ಟೂ ಇರುವುದಿಲ್ಲ. ಒಟ್ಟು ಸಾಮಾಜಿಕ ವ್ಯವಸ್ಥೆಯಲ್ಲಿ ತಮ್ಮ ತಮ್ಮ ಗುಂಪಿನ ಗಂಡಸರಿಗೇ ಬದ್ಧರಾಗಿದ್ದು ಇತರ ಗುಂಪುಗಳ ಸ್ತ್ರೀಯರಿಂದಲೂ, ಪ್ರತ್ಯೇಕಿತರಾಗಿರುವ ಈ ಸ್ತ್ರೀಯರು ದುಡಿಮೆಯ ನೆಲೆಯಲ್ಲಿ ಸ್ವತಃ ತಮ್ಮದೇ ಗುಂಪಿನ ಪುರುಷರಿಂದಲೂ, ಇತರ ಜಾತಿ–ವರ್ಗಗಳ ಸ್ತ್ರೀ–ಪುರುಷರಿಬ್ಬರಿಂದಲೂ ಶೋಷಿತರಾಗುವಂಥ ಅತ್ಯಂತ ಕೆಳಗಿನ ಸ್ಥಿತಿಯಲ್ಲಿರುವವರು.

ಕಲಿಕೆಯ ಮೂಲಕ ಸಾಮಾಜಿಕವಾಗಿ 'ಪ್ರತಿಷ್ಠಿತ'ವೆನ್ನಿಸುವ, ಒಳ್ಳೆಯ ವೇತನ ಗಳಿಸಿಕೊಡುವ ಉದ್ಯೋಗಾವಕಾಶಗಳು ದೊರೆವ ನಿರೀಕ್ಷೆ ಇದೆ. ಆದರೂ ಶಿಕ್ಷಕಿ, ವೈದ್ಯೆ ಮತ್ತು ದಾದಿಯಂಥ ಹುದ್ದೆಗಳು ಮಾತ್ರವೇ ಹೆಣ್ಣುಮಕ್ಕಳಿಗೆ ಹೆಚ್ಚು ಸೂಕ್ತವೆಂದು, ಮುಖ್ಯವಾಗಿ ಗುರುತಿಸಲ್ಪಡುತ್ತವೆ. ಇಂಥ ಉದ್ಯೋಗಗಳಿಂದ ಮಹಿಳೆಯರ ಜೀವನ ಮಟ್ಟ, ಕೌಟುಂಬಿಕ, ಸಾಮಾಜಿಕ ಸ್ಥಾನ ಮೇಲೆರುವುದೂ ಇದೆ. ಸರ್ಕಾರಿ ಕಾರ್ಯವಲಯದಲ್ಲಿ ಈ ಹುದ್ದೆಗಳ ಬಗ್ಗೆ 'ಪ್ರತಿಷ್ಠಿತ'ವೆಂಬಂಥ ಎಣಿಕೆ ಅಷ್ಟಾಗಿ ಇಂದು ಇಲ್ಲದಿದ್ದರೂ, ಸಾಮಾನ್ಯ ಸ್ತ್ರೀಯರ ಮನಸ್ಸುಗಳಲ್ಲಿ ಇಂಥ ಕಲ್ಪನೆ ಬೇರೂರಿದೆ. ಇಂಥ ಹುದ್ದೆಯುಳ್ಳವರ ನೆಲೆಯಿಂದ ಇತರ ದುಡಿಮೆ ಕ್ಷೇತ್ರಗಳಲ್ಲಿನ ಸ್ತ್ರೀಯರ ಸ್ಥಾನಮಾನ ಅಳೆಯುವ ರೀತಿಯಲ್ಲೇ ಗಂಡು–ಹೆಣ್ಣಿನ ನಡುವೆ ತಾರತಮ್ಯ ಉಳಿಸಿಕೊಂಡೇ ಇರುವ ಮಾರುಕಟ್ಟೆ ವ್ಯವಸ್ಥೆಯಲ್ಲಿ ಮೇಲು–ಕೀಳು ರಚನೆಗಳಿಗೆ ಇದು ಕಾರಣವಾಗುತ್ತದೆ.

ಆರ್ಥಿಕವಾಗಿ ಮೇಲೇರಿದಂತೆಲ್ಲ 'ಮನೆ ಒಳಗಿನ' 'ಮನೆ ಹೊರಗಿನ' ಹೆಣ್ಣಿನ ದುಡಿಮೆಗೆ ಭಿನ್ನ ರೀತಿಯಲ್ಲಿ ಬೆಲೆ ಕೊಡುವುದೂ ಜಾಸ್ತಿಯಾಗುತ್ತದೆ. ತೀರಾ ಬಡವರ್ಗದವರಿಗೆ ಬದುಕೇ ಹೋರಾಟವಾಗಿರುವುದರಿಂದ ಅವರ ಸ್ತ್ರೀಯರು 'ಬರೀ ಮನೆಗೆಲಸ' ಮಾಡಿಕೊಂಡು ಇರುವಂತ ಒಂದು ಸ್ಥಿತಿಯನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಾಗದಂತೆ ಬದುಕುತ್ತಿರುತ್ತಾರೆ. ಅದರೆ ಸಾಮಾಜಿಕವಾಗಿ ಮೇಲಿನ ಶ್ರೇಣಿಗೆ ಬಂದಂತೆ, ಹೊರಗಿನ ದುಡಿಮೆ ತಪ್ಪಿದರೆ ವಾಸಿ, ಅದು ಇಲ್ಲದಿರುವುದು ಸುಸ್ಥಿತಿಯ ಲಕ್ಷಣವೆನ್ನಿಸುತ್ತದೆ. ಮೇಲು ಜಾತಿ, ಕೆಳವರ್ಗಗಳ ಸ್ತ್ರೀಯರಲ್ಲಿ 'ಮನೆಯೊಳಗೇ ಉಳಿದು ದುಡಿದು ಗಳಿಸುವುದು' ಮರ್ಯಾದೆ ಎಂಬ ಭಾವನೆ ಇನ್ನೂ ಹಳ್ಳಿಗಾಡುಗಳಲ್ಲಿ ಉಂಟು. ಅದೇ ಆರ್ಥಿಕವಾಗಿ ಬಲಿಷ್ಠರಾದಲ್ಲಿ ಮಧ್ಯಮ ಜಾತಿಗಳ ಜನರೂ, ಹೊರ ದುಡಿಮೆಯಿಂದ ತಮ್ಮ ಸ್ತ್ರೀಯರನ್ನು ತಪ್ಪಿಸಲು ಬಯಸುತ್ತಾರೆ. ಹೊಲ ಗದ್ದೆಗಳಲ್ಲಿ ದುಡಿಯುವುದು ಶ್ರೀಮಂತ ಒಕ್ಕಲಿಗ ಸ್ತ್ರೀಯರಿಗೆ ಅಪಮಾನಕರವಾಗಿ ತೋರಬಹುದು. ಸಂಸ್ಕೃತೀಕರಣದಿಂದಾಗಿ—ಈ ರೀತಿ ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ಒಳ–ಹೊರ ದುಡಿಮೆಗಳಿಗೆ ಹುಟ್ಟುವ ಬೆಲೆಗಳು ಸುಶಿಕ್ಷಿತ ಸ್ತ್ರೀಯರ ಮೇಲೂ ತಮ್ಮ ಪ್ರಭಾವವನ್ನು ಹೊಂದಿರುತ್ತವೆ. ಮನೆ ಹೊರಗೆ ದುಡಿಯುವ ಶ್ರಮ ತಪ್ಪಿಸಿದರೆ ಸಾಕು ಎಂಬುದು ಹಲವು ದುಡಿಯುವ ಸ್ತ್ರೀಯರ ಮನಸದಲ್ಲೂ ಬೇರೂರಿದ 'ಸುಖದ ಕಲ್ಪನೆ'ಯಾಗಿರುತ್ತದೆ. ಉತ್ಪಾದನಾ ಸಂಪನ್ಮೂಲ, ಉತ್ಪಾದನಾ ಸಾಧನೆಗಳ ಮೇಲೆ ಹಾಗೂ ಅದರ ಫಲದ ಮೇಲೆ ಒಡೆತನ ಲಭ್ಯವಿದ್ದಾಗಿನ ಸ್ತ್ರೀಯರ ಮಾನಸಿಕ ಸ್ಥಿತಿ ಬೇರೆಯದೇ ರೀತಿಯದು ಎಂಬುದನ್ನು ಒಂದು ಉದಾಹರಣೆಯತ್ತ ನೋಡಬಹುದು. ತಾಯ್ತಂದೆಗಳ ಕಡೆಯಿಂದ ಚಿಕ್ಕ ಭೂಮಿಯ ಒಡತಿಯಾಗಿರುವ ಒಬ್ಬಾಕೆಗೆ ಮುದುಕ ಗಂಡ–ದುಡಿಯಲಾರದವನು, ಬೆಳೆದ ಮಗ ಜೂಜುಕೋರ. ಇತರ ಮಕ್ಕಳು ಇನ್ನೂ ಕಿರಿಯರು. ಇಂಥ ಸ್ಥಿತಿಯಿದ್ದರೂ ಆಕೆ ತನ್ನ ಸೊಸೆಯ ಜೊತೆ

ಒಬ್ಬಳೇ ಉತ್ತಿ, ಭಿತ್ತಿ, ಬೆಳೆಯುವವಳು, ಗಳಿಸುವವಳು, ಅವಳೇ ಮನೆಯ ಎಲ್ಲ ಮುಖ್ಯ ತೀರ್ಮಾನ ನಡೆಸುವ ಯಜಮಾನಿ. ದೂರದ ಊರುಗಳಿಗೆ ಒಬ್ಬಳೇ ಹೋಗಿ ಎತ್ತು, ದನ, ವ್ಯಾಪಾರ ಮಾಡಿ ಬರಬಲ್ಲ ಆಕೆಯ ಬಳಿ ನೆರೆಹೊರೆಯ ಹೆಂಗಸರೂ ಮಾರ್ಗದರ್ಶನ, ಸಲಹೆಗಳಿಗಾಗಿ ಬರುತ್ತಾರೆ. ಇಲ್ಲಿ ಉತ್ಪಾದನೆ ಮೇಲಿನ ಹಿಡಿತದಿಂದ ಆಕೆಯ ಸಾಮಾಜಿಕ ಸ್ಥಾನ ಆತ್ಮ ವಿಶ್ವಾಸದ ನೆಲೆಗೆ ಬದಲಾಗಿರುವುದನ್ನು ಗಮನಿಸಬೇಕು.

ಉತ್ಪಾದನಾ ಮೂಲದ ಅಧಿಕಾರಕ್ಕೂ, ಸಾಮಾಜಿಕ ಸ್ಥಾನಮಾನಕ್ಕೂ ಹೀಗೆ ಸಂಬಂಧ ಬಲವಾದದ್ದು. ಆದ್ದರಿಂದಲೇ ಅಧೀನಾವಸ್ಥೆಯಲ್ಲಿ ದುಡಿಯುವ ಸ್ತ್ರೀಯರ ಬದುಕು ಅವರ ದುಡಿಮೆ ಪರಿಸರದಿಂದ ಇನ್ನಷ್ಟು ಯಾತನಾಮಯವಾಗುತ್ತದೆ. ಬಡವರಾದ ನೇಕಾರರ ಕುಟುಂಬಗಳಲ್ಲಿ ಸ್ತ್ರೀಯರು, ಪುರುಷರು, ಮಕ್ಕಳು ಎಲ್ಲರೂ ಆರ್ಥಿಕ ಅಗತ್ಯಕ್ಕಾಗಿ ದುಡಿಯಲೇ ಬೇಕಾದವರು. ಆದರೆ ಅಲ್ಲೂ ಹೆಂಗಸರು ಹತ್ತಿ ಬಿಡಿಸಿ, ದಾರ ನೂಲುವ, ಗಂಡಸರು ನೇಯುವ ಬಟ್ಟೆಗೆ ಬಣ್ಣ ಕಟ್ಟುವ ಮುಂತಾದ ಕೆಲಸಗಳನ್ನು, ಅಗತ್ಯಬಿದ್ದಾಗ ನೇಯ್ಗೆಯ ಕೆಲಸವನ್ನು ಮಾಡುವವರು ಇಕ್ಕಟ್ಟಾದ, ಗಾಳಿ ಬೆಳಕಿರದ ಕೋಣೆಗಳಲ್ಲಿ ಹತ್ತಿಯ ಧೂಳು ರಾಶಿ ಮೈ ಕೈಯೆಲ್ಲ ಆವರಿಸಿರುವ ಸ್ಥಿತಿಯಲ್ಲಿ ದುಡಿಯುವ ಇವರು ಕಣ್ಣು ನೋವು, ಎದೆ ನೋವು, ಕೆಮ್ಮು, ಉಸಿರಾಟದ ತೊಂದರೆಗಳಿಗೆ ಒಳಗಾಗುವುದು ಸಾಮಾನ್ಯ. ದುಡಿಮೆ, ಶಿಕ್ಷಣಗಳಲ್ಲಿನ ಅಸಮಾನ ವ್ಯವಸ್ಥೆಯ ಮೂಲದ ಲಿಂಗತಾರತಮ್ಯವೇ ಆರೋಗ್ಯದ ಕ್ಷೇತ್ರದಲ್ಲೂ ಎದ್ದು ತೋರುತ್ತದೆ. ಸಾಮಾಜಿಕವಾಗಿ, ಕೌಟುಂಬಿಕವಾಗಿ ಒಬ್ಬ ಹಕ್ಕುದಾರ ವ್ಯಕ್ತಿಯಾಗಿಯೇ ಲೆಕ್ಕಕ್ಕಿರದ ಮಹಿಳೆಯ ಸ್ಥಾನ ಇಲ್ಲದಿದ್ದರೂ ನಡೆದೀತು, ಬಳಸಿ ಬಿಸಾಡಬಹುದಾದ ವಸ್ತುವಿನ ಹಾಗೆಯೇ ಇದೆ. ಸರ್ಕಾರವು ಹಾಕಿಕೊಂಡಿರುವ ಆರೋಗ್ಯ ರಕ್ಷಣಾ ಕಾರ್ಯಕ್ರಮಗಳಿಗೂ, ಬಹುಸಂಖ್ಯಾತ ಹೆಣ್ಣು ಮಕ್ಕಳ ಸ್ಥಿತಿಗಳಿಗೂ ಭಯಂಕರ ಸಾಂಸ್ಕೃತಿಕ ಕಂದರವಿದೆ ಎಂಬುದನ್ನು ಗುರುತಿಸಬೇಕಾದ್ದಿದೆ.

## ಆರೋಗ್ಯ

ಹಳ್ಳಿಗಳಲ್ಲಿ ಕುಟುಂಬ ಕ್ಷೇಮಾಭಿವೃದ್ಧಿ ಇಲಾಖೆ, ಸಮಾಜ ಸೇವಕಿಯರ ಮೂಲಕ ಆರೋಗ್ಯ ಕೇಂದ್ರಗಳನ್ನು ನಡೆಸುತ್ತದೆ. ಈ ಕಾರ್ಯಕರ್ತೆಯರು ಆಸುಪಾಸಿನ ಹಳ್ಳಿಗಳಿಗೆ ಹೋಗಿ, ಹೆಂಗಸರ ಮನವೊಲಿಸಿ, ಸಂತಾನ ನಿಯಂತ್ರಣ, ಗರ್ಭಪಾತ, ಶಸ್ತ್ರ ಚಿಕಿತ್ಸೆಗಳಿಗೆ ಅವರನ್ನು ಒಪ್ಪಿಸುವುದು, ಕರೆತಂದು ಜಿಲ್ಲಾ ಆಸ್ಪತ್ರೆಗಳಲ್ಲಿ ಅವರನ್ನು ಚಿಕಿತ್ಸೆಗೆ ಒಳಪಡಿಸುವುದು, ಚಿಕಿತ್ಸೆಗೆ ಮೊದಲು, ಅನಂತರ ಅವರ ಪೌಷ್ಟಿಕತೆ, ಆರೋಗ್ಯಗಳ ನಿಗಾ ನೋಡುವ ಹೊಣೆ ಎಲ್ಲವನ್ನೂ ನಿಭಾಯಿಸದೇ ಹೋದರೆ ಅವರು ಇಂತಿಷ್ಟು ಸಂಖ್ಯೆಯಲ್ಲಿ ಎಂದು ನಿಗದಿಯಾಗಿರುವ ಗುರಿಯನ್ನು ಮುಟ್ಟಲು ಕಷ್ಟವಾಗುತ್ತದೆ. ಸಂತಾನ ನಿಯಂತ್ರಣದ ಕಾರ್ಯಸಾಧನೆಯ ನಿಗದಿತ ಗುರಿ ಮುಟ್ಟದಿದ್ದರೆ, ಭತ್ಯೆಯ ಕಡಿತದ ಭೀತಿ; 10000ಕ್ಕೆ ಒಬ್ಬರಂತೆ ನೇಮಕಗೊಂಡಿರುವ ಮಿಡ್‌ವೈಫ್‌ಗೆ ನೋಡಿಕೊಳ್ಳಲು ಸಾಧ್ಯವಾಗುವುದು 3000–4000 ಜನರನ್ನು ಮಾತ್ರ. ಈ ಸುತ್ತಾಟದ ಅವಧಿಯಲ್ಲಿ ಆರೋಗ್ಯ ಕೇಂದ್ರ ವಾರಗಟ್ಟಲೆ, ತಿಂಗಳುಗಟ್ಟಲೆ ಮುಚ್ಚಿರುವುದು ಅನಿವಾರ್ಯ. ಜೊತೆಗೆ ಗರ್ಭಧಾರಣೆ, ತಾಯಿತನ, ಹೆರಿಗೆ ಮುಂತಾದವುಗಳ ಬಗ್ಗೆ ಆಯಾ ಸಮುದಾಯಗಳಲ್ಲಿ ರೂಢಿಗತವಾದ ಧಾರ್ಮಿಕಾದಿ ನಂಬಿಕೆಗಳಿಗೆ ವಿರುದ್ಧ ರೀತಿಯಲ್ಲಿ ಏಕದೃಷ್ಟಿಯ ಚಿಕಿತ್ಸಾ ವಿಧಾನಗಳನ್ನು ಈ ಮಿಡ್‌ವೈಫ್‌ನಂಥವರು ಅಳವಡಿಸಿಕೊಳ್ಳುವುದರಿಂದ ಹಳ್ಳಿಗಳಲ್ಲಿ ಹೆಂಗಸರಿಗೆ ಇವರ ಬಗ್ಗೆ ವಿಶ್ವಾಸ ಹುಟ್ಟುವುದೇ ದೊಡ್ಡ ಸಮಸ್ಯೆಯಾಗಿರುತ್ತದೆ. ಗಂಡುಮಕ್ಕಳ ಮೋಹ, ಶಸ್ತ್ರ ಚಿಕಿತ್ಸೆಯ ಭೀತಿ ಮುಂತಾದವುಗಳು ಇವರನ್ನು ಆರೋಗ್ಯ ಕೇಂದ್ರಗಳಿಂದ ದೂರವುಳಿಸಬಹುದು. ಕುಟುಂಬ ಕಲ್ಯಾಣದ ಯೋಜನೆಗಳು ಕುಟುಂಬ ರಕ್ಷಣೆಗಿಂತ ಹೆಚ್ಚಾಗಿ, ಕುಟುಂಬ ನಿಯಂತ್ರಣಕ್ಕೆ ಒತ್ತುಕೊಟ್ಟಿರುವುದೂ ಇಲ್ಲಿ ಸಮಸ್ಯೆಗೆ ಕಾರಣ.

ಪೌಷ್ಟಿಕಾಂಶದ ಅವಶ್ಯಕತೆ ಬಗ್ಗೆ ತಿಳುವಳಿಕೆ ನೀಡಲು ಆರೋಗ್ಯ ರಕ್ಷಣಾ ಇಲಾಖೆ, ಹಳ್ಳಿಗಳಲ್ಲಿ ಶಾಲೆಗಳು, ಅಂಗನವಾಡಿಗಳು, ಮಹಿಳಾ ಮಂಡಲಗಳು ಮುಂತಾದವುಗಳ ಮೂಲಕ ಸ್ತ್ರೀಯರಲ್ಲಿ ಜಾಗೃತಿ ಉಂಟು ಮಾಡುವಂಥ ಯೋಜನೆಗಳಲ್ಲಿ ಪೌಷ್ಟಿಕಾಂಶ ಸಾಧನೆಯ ಪ್ರಯತ್ನವೂ ಮುಖ್ಯವಾದದ್ದು. ಪ್ರಯೋಗಾರ್ಥವಾಗಿ ಮಕ್ಕಳಿಗೆ, ಗರ್ಭಿಣಿಯರು, ಬಾಣಂತಿಯರಿಗೆಂದು ಆರಂಭಿಸಿರುವುದರ ಹಿಂದಿನ ನಂಬಿಕೆ ಇದೇ ಆಗಿದೆ. ಆದರೆ ಪೌಷ್ಟಿಕಾಂಶದ ಕೊರತೆಯಂಥ ಬೃಹದಾಕಾರದ ಸಮಸ್ಯೆಗೆ–ಈ ಬಗೆಯ ಯೋಜನೆಗಳು ಅಂಚಿನ ನೆಲೆಯ ಪರಿಹಾರವನ್ನಷ್ಟೆ ನೀಡಬಲ್ಲವು. ಕೊಳ್ಳಬಲ್ಲ ಆರ್ಥಿಕ ಸಾಮರ್ಥ್ಯವೇ ಇಲ್ಲದವರಿಗೆ ಕೇವಲ ಶೈಕ್ಷಣಿಕ ಅರಿವು ಏನು ಪ್ರಯೋಜನ ಮಾಡಬಲ್ಲದು ? ಸರ್ಕಾರಿ ಅಂಕಿ–ಅಂಶಗಳ ರೀತಿಯಿಂದಲೂ

ಶೇ. 50 ಜನ ಬಡತನದ ರೇಖೆಯ ಕೆಳಗೇ ಉಳಿದಿರುವಂಥ ಈ ಸಮಾಜದಲ್ಲಿ ಬಡತನದ ವಿರುದ್ಧವಾದ ನೇರವಾದ ಹೋರಾಟ, ಜನರ ಆರ್ಥಿಕ ಸಾಮರ್ಥ್ಯದ ಹೆಚ್ಚಳದಿಂದ ಮಾತ್ರ ಅಪೌಷ್ಟಿಕತೆಯ ಸಮಸ್ಯೆಯನ್ನು ಎದುರಿಸಲು ಸಾಧ್ಯವಾಗಬಹುದು.

ಪೌಷ್ಟಿಕತೆಯನ್ನು ಕನಿಷ್ಠ ಅವಶ್ಯಕತೆಯ ಯೋಜನೆಯ ಅಂಗವಾಗಿ ಸಾಧಿಸಲು ಸಮಾಜ ಕಲ್ಯಾಣ ಇಲಾಖೆಗಳನ್ನು ಒಳಗೊಂಡಿದ್ದು, ಶಾಲೆಗಳು, ಬಾಲವಾಡಿಗಳು, ಮಹಿಳಾ ಮಂಡಲಗಳ ಮೂಲಕ ಇದನ್ನು ಸಾಧಿಸಲು ಯತ್ನಿಸುತ್ತಿದೆ. ಕೈತೋಟ ಯೋಜನೆ, ನಿರ್ಲಕ್ಷಿತರನ್ನು ಪರೀಕ್ಷೆಗೆ ಒಳಪಡಿಸುವುದು ಮುಂತಾದ ಕಾರ್ಯಕ್ರಮಗಳು ಈ ದೃಷ್ಟಿಯಿಂದಲೇ ರೂಪಿತವಾಗಿವೆ.

ಸರ್ಕಾರದ ಎಲ್ಲ ಯೋಜನೆಗಳು ಸಫಲವಾಗಬೇಕಾದಲ್ಲಿ ಮಹಿಳೆಯರ ಸಮಸ್ಯೆಯನ್ನು ಉತ್ಪಾದಕರದು–ಸಂತಾನೋತ್ಪಾದಕರದು—ಎಂಬ ಎರಡೂ ಮುಖಗಳಲ್ಲಿ ಗ್ರಹಿಸಬೇಕಾದ್ದು ಅತ್ಯವಶ್ಯಕ. ನಿರಕ್ಷರತೆ, ಅಲ್ಪ ಉದ್ಯೋಗಾವಕಾಶ, ಕಡಿಮೆ ಆದಾಯ, ಅಪೌಷ್ಟಿಕತೆ, ಸಂತಾನೋತ್ಪಾದನೆಯ ಏರಿಕೆಗಳ ಎಲ್ಲ ದಿಕ್ಕಿನ ಒತ್ತಡಗಳು ಒಟ್ಟಾಗಿ ಮಹಿಳೆಯರ ಶೋಷಣೆಯನ್ನು, ಕೆಳಸ್ತರದ ನೆಲೆಯನ್ನು ನಿರಂತರವಾಗಿ ಉಳಿಸಿಡುತ್ತಾ ಬರುತ್ತಿವೆ. ಮಹಿಳೆಯರ ಸ್ಥಿತಿಗತಿಗಳಲ್ಲಿ ಇತ್ಯಾತ್ಮಕ ಬದಲಾವಣೆ ತರಬಲ್ಲ ವಿಷಯಗಳನ್ನು ಉದ್ಯೋಗ, ಆರೋಗ್ಯ, ಶಿಕ್ಷಣ ಮುಂತಾಗಿ ಪ್ರತ್ಯೇಕಿಸಿ ನೋಡಬಾರದು. ಇವುಗಳು ಪರಸ್ಪರ ಆಂತರಿಕವಾಗಿ ಸಂಬಂಧ ಹೊಂದಿದ್ದು—ಮಹಿಳೆಯರ ಅಭಿವೃದ್ಧಿಗೆ ದೊಡ್ಡ ಸವಾಲುಗಳಾಗಿವೆ. ಯೋಜನಾ ಆಯೋಗಗಳ ಮಂದಿ ಅಭಿವೃದ್ಧಿಯ ಯೋಜನೆಗಳನ್ನು ರೂಪಿಸುವಾಗ ಸ್ಥಳೀಯವಾದ ಸಾಮಾಜಿಕ-ಸಾಂಸ್ಕೃತಿಕ ಆಯಾಮಗಳ ಬಗ್ಗೆ ಎಳ್ಳಷ್ಟೂ ಗಮನ ಕೊಡದೆ, ಅಂದಿನ ನೆಲೆಯ ಪರಿಹಾರಗಳನ್ನು ಮಾತ್ರ ಒದಗಿಸುತ್ತಾ ಹೋದರೆ–ಅಭಿವೃದ್ಧಿಯ ಪ್ರಕ್ರಿಯೆಯಲ್ಲಿ ಮಹಿಳೆಯರನ್ನು ಸಮಗ್ರವಾಗಿ, ಸಮಾನವಾಗಿ ಪಾಲ್ಗೊಳ್ಳುವಂತೆ ಮಾಡುವುದು ಅಸಾಧ್ಯವಾಗುತ್ತದೆ. ಸಾಮಾಜಿಕ ಸಂಘಟನೆಯ ಹಾಗೂ ಅನುಭವದ ಸ್ತರಗಳಾಗಿರುವ ಕುಟುಂಬ, ಶಾಲೆ, ಸಮುದಾಯ, ಶ್ರಮದ ಮಾರುಕಟ್ಟೆ ಮತ್ತು ಮಾಧ್ಯಮಗಳೇ ಒಂದು ಖಚಿತ ಚೌಕಟ್ಟಿನೊಳಗೆ ಕೆಲಸ ಮಾಡುವುದರಿಂದಾಗಿ ಬದಲಾವಣೆ ಕುರಿತ ಯಾವುದೇ ಪ್ರಯತ್ನವೂ ಬಹುಮುಖ ಆಯಾಮವನ್ನು ಹೊಂದಿರಬೇಕಾದ್ದು ಅತ್ಯವಶ್ಯಕ.

[ದಾವಣಗೆರೆಯಲ್ಲಿ ಜುಲೈ 29 ರಿಂದ 31ರ ವರೆಗೆ ನಡೆದ 'ಮಹಿಳೆ ಮತ್ತು ಕಾನೂನು' ಎಂಬ ರಾಜ್ಯ ಮಟ್ಟದ ಸಮತಾ ಕಾರ್ಯಾಗಾರದ ಸಂದರ್ಭದಲ್ಲಿ ಮಂಡಿಸಿದ ಭಾಷಣವಿದು].

---

*Reg No. MAG (5)/PRC, DEGL 036/89/87*
BOOK-POST/Periodicals

*To*

*If undelivered please return to :*
**Jagruthi Mahila Adhyayana Kendra**
401, Vijay Tower, 2nd Main, RPC Layout
**Vijayanagar, II Stage,** Bangalore-560 040